ದಾನ ಮಾಡಿರಿ, ಆದರೆ ಅದರಿಂದ ಪ್ರತಿಫಲ ನಿರೀಕ್ಷಿಸಬೇಡಿ. ಅದು ತಾನಾಗಿಯೇ ವಾಪಸ್ ಬರಲಿದೆ
–ಸ್ವಾಮಿ ವಿವೇಕಾನಂದ

# ಬೀದರವಾಣಿ

ಬೀದರ ಜಿಲ್ಲೆಯ ನಿರ್ಭಯ, ನಿಷ್ಪಕ್ಷಪಾತ ಏಕೈಕ ಅಂತರಜಾಲ(Online)

ಸಂಪಾದಕರು:ಸಿದ್ರಾಮಯ್ಯ ಸ್ವಾಮಿ EDITOR:SIDRAMAYYA SWAMY

ಸೋತೆ ಎಂದು ನೀ ಮುಂದಿಟ್ಟ ಹೆಜ್ಜೆ ಹಿಂದಿಡಬೇಡ... ಏಕೆಂದರೆ... ಯಾರಿಗೆ ಗೊತ್ತು ಆ ಹೆಜ್ಜೆ ನಿನ್ನ ಇತಿಹಾಸವನ್ನೇ ಸೃಷ್ಟಿ ಮಾಡುವ ಹೆಜ್ಜೆಯಾಗಿರಬಹುದು...

bidarvani.com ಇ-ಪೇಪರ್bidarvani.online bidarvani bidarvani@gmail.com Whatsapp Contact:9148471077

KARKAN/77693/2019 ಸಂಪುಟ:08 ಸಂಚಿಕೆ:203 ದಿನಾಂಕ:12.11.2025 ಬುಧವಾರ ಪುಟ.4 ಬೆಲೆ:02 ರೂ ಮೊ.9945793175

## ಕನ್ನಡ ಕುರಾನ್ ಪ್ರವಚನ ಸರ್ವಧರ್ಮ ಸಮನ್ವಯದ ಸಮಾರಂಭ



ಬೀದರ.ನ.11:ಹಿಂದೂಗಳು, ಮುಸ್ಲಿಮರು, ಲಿಂಗಾಯತರು, ಕುರುಬರು, ಬೌದ್ಧರು ಮತ್ತು ಕ್ರಿಶ್ಚಿಯನ್ನರು ಸೇರಿದಂತೆ ವಿವಿಧ ಸಮುದಾಯಗಳ ಹತ್ತು ಸಾವಿರಕ್ಕೂ ಹೆಚ್ಚು ಜನರು ವಾಸಿಸುವ ಚಿಕ್ಕ ಪಟ್ಟಣವಾದ ಬಗ್ದಲ್‌ನಲ್ಲಿ ಒಂದು ವಿಶಿಷ್ಟ ಕಾರ್ಯಕ್ರಮವು ಎಲ್ಲರನ್ನೂ ಸ್ನೇಹ ಮತ್ತು ಸದ್ಭಾವನೆಯ ಮನೋಭಾವದಿಂದ ಒಟ್ಟುಗೂಡಿಸಿತು.ಜಮಾಅತೆ ಇಸ್ಲಾಮಿ ಹಿಂದ್ (ಜೆಐ ಎಚ್) ಬಗ್ದಲ್ ಘಟಕವು ಆಯೋಜಿಸಿದ ಈ ಕನ್ನಡ ಕುರಾನ್ ಪ್ರವಚನವು ಸರ್ವಧರ್ಮ ಸಾಮರಸ್ಯದ ಗಮನಾರ್ಹ ಉದಾಹರಣೆಯಾಗಿ, ನಿರೀಕ್ಷೆಗೂ ಮೀರಿದ ಜನಸಮೂಹವನ್ನು ಸೆಳೆಯಿತು. ಸುಮಾರು ಸಾವಿರ ಜನರು ಹಾಜರಾಗುವ ನಿರೀಕ್ಷೆಯಿದ್ದು, ಆದರೆ ಸಭಾಂಗಣವು ವಿವಿಧ ಧರ್ಮಗಳ ಪುರುಷರು ಮತ್ತು ಮಹಿಳೆಯರಿಂದ ತುಂಬಿ ತುಳುಕಿತ್ತು. ಕುರಾನ್ ಸಂದೇಶ: ನ್ಯಾಯ ಮತ್ತು ಸಹಾನುಭೂತಿ ಖ್ಯಾತ ವಾಗ್ಮಿ ಹಾಗೂ ಜಮಾಅತೆ ಇಸ್ಲಾಮಿ ಹಿಂದ್ ಕರ್ನಾಟಕದ ರಾಜ್ಯ ಕಾರ್ಯದರ್ಶಿ ಮುಹಮ್ಮದ್ ಕುಂಞಟಿ ಜಜಜಿುಟಿಜಜ ಅವರು ಕುರಾನ್ ಪ್ರವಚನ ನೀಡಿದರು.

ಕುರಾನ್ ಮಾನವೀಯತೆಗೆ ಮಾರ್ಗದರ್ಶಿಯಾಗಿದೆ. ನ್ಯಾಯ,ಕರುಣೆ ಮತ್ತು ನೈತಿಕ ಸಮಗ್ರತೆಯೇ ಕುರಾನಿನ ಸಂದೇಶವಾಗಿದೆ ಎಂದು ಬೋಧನೆಗಳನ್ನು ಒತ್ತಿ ಹೇಳಿದರು.

"ಕುರಾನ್ ಚಿಂತನೆ ಮತ್ತು ಆಳವಾದ ತಿಳುವಳಿಕೆಯನ್ನು ಬಯಸುತ್ತದೆ. ಸಮಾಜದಲ್ಲಿ ಶಾಂತಿ ನೆಲೆಸಬೇಕಾದರೆ ನಮ್ಮ ಹೃದಯಗಳಲ್ಲಿ ನ್ಯಾಯದ ಪ್ರಜ್ಞೆ ಮತ್ತು ನಮ್ಮ ಕಾರ್ಯಗಳು ಸಹಾನುಭೂತಿಯಿಂದ ಕೂಡಿರಬೇಕು. ಇವು ಕೇವಲ ಇಸ್ಲಾಮಿ ಮೌಲ್ಯಗಳಲ್ಲ; ಅವು ಸಾರ್ವತ್ರಿಕ ಮಾನವ ಮೌಲ್ಯಗಳಾಗಿವೆ," ಎಂದು ಮುಹಮ್ಮದ್ ಕುಂಞಟಿಜಜಜಿುಟಿಜಜ ಹೇಳಿದರು.

ವಿವಿಧ ಸಮುದಾಯ ನಾಯಕರಿಂದ ಸಂದೇಶ ಶ್ಲಾಘನೆ ವಿವಿಧತೆಯಲ್ಲಿ ಏಕತೆಯನ್ನು ಸಾರುವ ಈ ಕಾರ್ಯಕ್ರಮದಲ್ಲಿ ವಿವಿಧ ಸಮುದಾಯಗಳ ಪ್ರಮುಖ ನಾಯಕರು ಮತ್ತು ಧಾರ್ಮಿಕ ಮುಖಂಡರು ವೇದಿಕೆಯನ್ನು ಹಂಚಿಕೊಂಡು ಈ ಕಾರ್ಯಕ್ರಮವನ್ನು ಮುಕ್ತವಾಗಿ ಶ್ಲಾಘಿಸಿದರು. ಶ್ರೀ ಬಸವರಾಜ ಪಾಟೀಲ್ (ಲಿಂಗಾಯತ ನಾಯಕ): "ಪರಸ್ಪರರ ಧರ್ಮಗ್ರಂಥಗಳನ್ನು ಕೇಳುವುದರಿಂದ ತಪ್ಪು ತಿಳುವಳಿಕೆಗಳು ದೂರವಾಗುತ್ತವೆ. ಇಂತಹ ಪ್ರಯತ್ನಗಳು ನಮ್ಮನ್ನು ಹತ್ತಿರ ತರುತ್ತವೆ." ಎಂದರು. ರೆವರೆಂಡ್ ಫಾದರ್ ಡಿ'ಸೋಜಾ (ಬೀದರ್‌ನ ಸೇಕ್ರೆಡ್ ಹಾರ್ಟ್ ಚರ್ಚ್): "ಇಂದು ನಾವು ನಮ್ಮದೇ ಭಾಷೆಯಲ್ಲಿ ಕುರಾನ್ ಕೇಳಿದ್ದೇವೆ. ಪ್ರಾಮಾಣಿಕತೆ, ಪ್ರೀತಿ ಮತ್ತು ಸೇವೆಯ ಮೌಲ್ಯಗಳಲ್ಲಿ ನಾವೆಲ್ಲರೂ ಎಷ್ಟು ಹಂಚಿಕೊಳ್ಳುತ್ತೇವೆ ಎಂಬುದನ್ನು ನೋಡಲು ಇದು ಸಹಾಯ ಮಾಡಿತು." ಭಂತೆ ಮಹೇಂದ್ರ (ಬೌದ್ಧ ಸನ್ಯಾಸಿ): "ವಿಭಿನ್ನ ಧರ್ಮಗಳ ಜನರು ಒಟ್ಟಿಗೆ ಶಾಂತಿಯಿಂದ ಕುಳಿತಾಗ, ವಿಭಜನೆಗಿಂತ ದಯೆ ಬಲವಾಗಿರುತ್ತದೆ ಎಂದು ಅದು ತೋರಿಸುತ್ತದೆ."ಡಾ. ಶೈಲೇಂದ್ರ ಬೆಲ್ದಾಳೆ (ದಕ್ಷಿಣ ಬೀದರ್ ಶಾಸಕ): "ಇಂತಹ ಕಾರ್ಯಕ್ರಮಗಳು ಎಲ್ಲಾ ಸಮುದಾಯಗಳ ನಡುವೆ ಸಹೋದರತ್ವವನ್ನು ಸೃಷ್ಟಿಸಲು ಮತ್ತು ಹೆಚ್ಚಿಸಲು ಸಹಾಯ ಮಾಡುತ್ತವೆ."

ಬಿಮಲ್ ಖೇಡಾದ ಸಂಸ್ಥಾನ ಹಿರೇ ಮಠದ ಡಾ. ಶ್ರೀ ಚಂದ್ರಶೇಖರ ಶಿವಾಚಾರಿಯ ಮತ್ತು ಫಾದರ್ ಕ್ಲೆರಿ ಡಿ'ಸೋಜಾ ಅವರಂತಹ ಗಣ್ಯರು ಸಮುದಾಯಗಳ ನಡುವಿನ ಬಾಂಧವ್ಯವನ್ನು ಬಲಪಡಿಸುವ ಉದಾತ್ತ ಹೆಜ್ಜೆ ಎಂದು ಅಭಿಪ್ರಾಯ ಹಂಚಿದರು. ಮುಂದಿನ ಹೆಜ್ಜೆ ಜೆಐಎಚ್ ಜಿಲ್ಲಾ ಸಂಘಟಕ ಇಕ್ಬಾಲ್ ಗಾಝಿ ಮಾತನಾಡಿ, "ನಮ್ಮ ಜನರ ನಡುವೆ ಅಸ್ತಿತ್ವದಲ್ಲಿರುವ ಸಾಮರಸ್ಯವನ್ನು ಬಲಪಡಿಸುವುದು ನಮ್ಮ ಗುರಿಯಾಗಿತ್ತು.

ಕುರಾನ್ ಸಂದೇಶವನ್ನು ಕನ್ನಡದಲ್ಲಿ ಪ್ರಸ್ತುತಪಡಿಸುವ ಮೂಲಕ, ಎಲ್ಲರೂ ಸಾಮರಸ್ಯ ಬೆಳೆಸಬೇಕು ಎಂದು ನಾವು ಬಯಸಿದ್ದೇವೆ ಎಂದು ಹೇಳಿದರು.

ಭಾಗವಹಿಸಿದವರಿಗೆ ಆಯ್ದ ಕುರಾನ್ ವಚನಗಳು ಮತ್ತು ಅವುಗಳ ಅರ್ಥಗಳನ್ನು ಒಳಗೊಂಡಿರುವ ಕನ್ನಡ ಕಿರುಪುಸ್ತಕಗಳನ್ನು ನೀಡಲಾಯಿತು, ಇದು ಮತ್ತಷ್ಟು ಚಿಂತನೆ ಮತ್ತು ಸಂವಾದವನ್ನು ಪ್ರೋತ್ಸಾಹಿಸುತ್ತದೆ.

## ಹೊನ್ನಿಕೇರಿ ಸಿದ್ದೇಶ್ವರ ದೇವಸ್ಥಾನದ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಲಿ

## ದೇವಸ್ಥಾನಕ್ಕೆ ಬರುವ ಭಕ್ತರಿಗೆ ಯಾವುದೇ ರೀತಿಯ ಅನಾನುಕೂಲ ಆಗದಂತೆ ಎಚ್ಚರ ವಹಿಸಿ

ಬೀದರ್.ನ.11:ದಕ್ಷಿಣ ಕ್ಷೇತ್ರದ ಸುಪ್ರಸಿದ್ಧ ಶ್ರೀ ಹೊನ್ನಿಕೇರಿ ಸಿದ್ಧೇಶ್ವರ ದೇವಸ್ಥಾನದಲ್ಲಿ ದಿ.12 ರಂದು ನಾಳೆ ನಡೆಯಲಿರುವ ನೂತನ ಗೋಪುರದ ಕಳಸಾರೋಹಣ ಹಾಗೂ ಲಕ್ಷ ದೀಪೋತ್ಸವ, ವಿಶ್ವ ಕಲ್ಯಾಣ ಲೋಕ ಕಲ್ಯಾಣ, ಗ್ರಾಮ ಕಲ್ಯಾಣ ವಿಶೇಷ ಪೂಜೆ ಕಾರ್ಯಕ್ರಮದ ವಿಜ್ರಂಭಣೆಯಿಂದ ನಡೆಯಬೇಕು ಸಿದ್ದೇಶ್ವರ ದೇವಸ್ಥಾನಕ್ಕೆ ಬರುವ ಭಕ್ತರಿಗೆ ಯಾವುದೇ ರೀತಿಯ ಅನಾನುಕೂಲ ಆಗದಂತೆ ನೋಡಿಕೊಳ್ಳಬೇಕು ಎಂದು ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಹೇಳಿದರು.

ಬೀದರ್ ದಕ್ಷಿಣ ಕ್ಷೇತ್ರದ ಸುಪ್ರಸಿದ್ಧ ಶ್ರೀ ಹೊನ್ನಿಕೇರಿ ಸಿದ್ಧೇಶ್ವರ ದೇವಸ್ಥಾನದಲ್ಲಿ ದಿ. 12 ರಂದು ನೂತನ ಗೋಪುರದ ಕಳಸಾರೋಹಣ ಹಾಗೂ ಲಕ್ಷ ದೀಪೋತ್ಸವ, ವಿಶ್ವ ಕಲ್ಯಾಣ ಲೋಕ ಕಲ್ಯಾಣ, ಗ್ರಾಮ ಕಲ್ಯಾಣ ವಿಶೇಷ ಪೂಜೆ ಕಾರ್ಯಕ್ರಮ ಶ್ರೀ ಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರುಗಳವರ ನೇತೃತ್ವದಲ್ಲಿ ನಡೆಯುತ್ತಿರುವ ಕಾರ್ಯಕ್ರಮದ ಪೂರ್ವ ಸಿದ್ಧತೆ ಕುರಿತು ಪರಿಶೀಲನೆ ನಡೆಸಿ ಮಾತನಾಡಿದರು.

ಹಲವು ವಿಸ್ಮಯಗಳನ್ನು ಒಡಲಲ್ಲಿ ಇಟ್ಟು ಕೊಂಡಿರುವ ಹೊನ್ನಿಕೇರಿ ಸಿದ್ದೇಶ್ವರ ದೇವಾಲಯವು ಬೀದರ್ ಜಿಲ್ಲೆಯ, ಬೀದರ್ ತಾಲೂಕಿನ ಹೊನ್ನಿಕೇರಿ ಗ್ರಾಮದಲ್ಲಿ ಬೆಟ್ಟದ ಮೇಲೆ ನೆಲೆಗೊಂಡಿರುವ ಒಂದು ಶತಮಾನದಷ್ಟು ಹಳೆಯ ಸುಪ್ರಸಿದ್ಧ ದೇವಾಲಯವಾಗಿದೆ. ಈ ದೇವಾಲಯಕ್ಕೆ ನಮ್ಮ ರಾಜ್ಯ ಸೇರಿ ಆಂಧ್ರ ಪ್ರದೇಶ, ಮಹಾರಾಷ್ಟ್ರ, ತೆಲಂಗಾಣ ರಾಜ್ಯಗಳಿಂದಲೂ ಭಕ್ತರನ್ನು ಆಕರ್ಷಿಸುತ್ತದೆ ಈ ದೇವಸ್ಥಾನದಲ್ಲಿ ಹಲವು ವರ್ಷಗಳ ಬಳಿಕ ಕಳಸಾರೋಹಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಈ ಕಾರ್ಯಕ್ರಮಕ್ಕೆ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಸೇರಲಿದ್ದು ಇಂದು ಕಾರ್ಯಕ್ರಮದ ವೇದಿಕೆ ಪೂರ್ವ ಸಿದ್ಧತೆ ಕುರಿತು ಗ್ರಾಮಸ್ಥರೊಂದಿಗೆ ಪರಿಶೀಲನೆ ನಡೆಸಿದೆ. ಕಾರ್ಯಕ್ರಮಕ್ಕೆ ಬರುವ ಭಕ್ತಾದಿಗಳಿಗೆ ಮೂಲ ಸೌಕರ್ಯ ಕಲ್ಪಿಸಲು ನಾವೆಲ್ಲರೂ ಹಗಲಿರುಳು ಶ್ರಮಿಸುವುದು ನಮ್ಮೆಲ್ಲರ ಕರ್ತವ್ಯ. ದೇವಸ್ಥಾನಕ್ಕೆ ಬರುವ ಭಕ್ತರಿಗೆ ಯಾವುದೇ ರೀತಿಯ ಅನಾನುಕೂಲ ಆಗದಂತೆ ನೋಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.



### ಡಾ.ಶಿವಕುಮಾರ ಸ್ವಾಮೀಜಿ ಜಯಂತಿ ಮಹೋತ್ಸವ ಆರಂಭ

## ಆತ್ಮ–ಅನಾತ್ಮ ಜ್ಞಾನದಿಂದ ದುಃಖ ನಿವಾರಣೆ



ಬೀದರ್.ನ.11:ಆತ್ಮ–ಅನಾತ್ಮದ ಜ್ಞಾನದಿಂದ ಮಾತ್ರ ಜೀವನದ ದುಃಖ ನಿವಾರಣೆ ಸಾಧ್ಯವಿದೆ ಎಂದು ಸಿದ್ಧಾರೂಢ ಮಠದ ಪೀಠಾಧಿಪತಿ ಡಾ. ಶಿವಕುಮಾರ ಸ್ವಾಮೀಜಿ ನುಡಿದರು.

ಇಲ್ಲಿಯ ಸಿದ್ಧಾರೂಢ ಮಠದಲ್ಲಿ ಮಂಗಳವಾರ ಆರಂಭವಾದ ಡಾ. ಶಿವಕುಮಾರ ಸ್ವಾಮೀಜಿ ಅವರ 82ನೇ ಜಯಂತಿ ಮಹೋತ್ಸವದ ಉದ್ಘಾಟನಾ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದರು.

ಜನನ ಮೊದಲ, ಮರಣ ಎರಡನೇ ದುಃಖ. ದುಃಖಕ್ಕೆ ಮೂಲ ಅಜ್ಞಾನ. ದುಃಖಕ್ಕೆ ಕಾರಣ ತಿಳಿಯದಿದ್ದರೆ ಅದರಿಂದ ಪಾರಾಗಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಕಲಬುರಗಿಯ ಮಾತೆ ಲಕ್ಷ್ಮಿದೇವಿ ಮಾತನಾಡಿ, ಜನ–ಮರಣದ ಬೇರು ಕತ್ತರಿಸಲು ಗುರು ಕೃಪೆ ಬೇಕೇ ಬೇಕು. ಶರೀರ, ಇಂದ್ರೀಯ ತಾನಾರೆಂದು ಅರಿಯಲು ಗುರುವಿಗೆ ಶರಣಾಗಬೇಕು. ಭಕ್ತಿ ಮಾರ್ಗ ಅಷ್ಟು ಸುಲಭವಲ್ಲ. ಅನಂತ ಜನ್ಮದ ಪುಣ್ಯದ ಫಲವಿದ್ದರೇನೇ ಅದು ಸಾಧ್ಯ ಎಂದು ಹೇಳಿದರು.

ಜಡಿಸಿದ್ಧ ಸ್ವಾಮೀಜಿ ಮಾತನಾಡಿ, ಗುರು ಎಂಬ ಎರಡಕ್ಷರ ತಿಳಿದರೆ ಶಿಷ್ಯ ಉದ್ಧಾರವಾಗುತ್ತಾನೆ. ಜ್ಞಾನ ತೃಷೆ ಶಿಷ್ಯನಿಗಿರಬೇಕು. ತೀವ್ರ ಇಚ್ಛಾಶಕ್ತಿ ಇದ್ದವನೇ ಗುರುವಿಗೆ ಶರಣು ಹೋಗುತ್ತಾನೆ. ಆಸೆ ಬಿಟ್ಟವನೇ ಈಶನಾಗುತ್ತಾನೆ ಎಂದು ತಿಳಿಸಿದರು.

ಮಾತೆ ಆನಂದಮಯಿ ಮಾತನಾಡಿ, ಜಗತ್ತಿನಲ್ಲಿ ನಾನು ಅನ್ನುವುದೇ ಅಜ್ಞಾನ. ತಾನಾರು ಎಂದು ತಿಳಿಯದಿರುವುದೇ ಅಜ್ಞಾನಕ್ಕೆ ಕಾರಣ. ಮನುಷ್ಯ ಜನನ–ಮರಣವೆಂಬ ಭವ ಬಾಧೆಗೆ ಕಾರಣನಾಗುತ್ತಿದ್ದಾನೆ. ಜನ್ಮದಿಂದ ಜನ್ಮಕ್ಕೆ ಹೋಗುವುದೇ ಸಂಸಾರ ಎಂದು ಹೇಳಿದರು.

ದಯಾನಂದ ಸ್ವಾಮೀಜಿ ಮಾತನಾಡಿ, ನಾನಾರೆಂಬುದ್ದನ್ನು ತಿಳಿಯುವುದೇ ಮನುಷ್ಯ ಮಾಡಬೇಕಾದ ಮೊದಲ ಕೆಲಸ. ಈ ತಿಳಿವಳಿಕೆ ಬರಬೇಕಾದರೆ ಗುರುವಿನ ಮಾರ್ಗದರ್ಶನ ಅವಶ್ಯಕ ಎಂದು ಹೇಳಿದರು.

ಸ್ವಾಮಿ ಸ್ವಾತ್ಮಾನಂದಗಿರಿ ಮಾತನಾಡಿ, ಶಿಷ್ಯನ ಹಿತ ಬಯಸುವವನು ಹಾಗೂ ಜನ–ಮರಣವೆಂಬ ಭವಾರಣ್ಯದಿಂದ ಪಾರು ಮಾಡುವ ಸಾಮರ್ಥ್ಯ ಇದ್ದವನೇ ಗುರು ಎಂದು ತಿಳಿಸಿದರು.

ಶಂಕರಾನಂದ ಸ್ವಾಮೀಜಿ, ಗಣೇಶಾನಂದ ಮಹಾರಾಜ, ಅದ್ವೈತಾನಂದ ಸ್ವಾಮೀಜಿ, ಶಿವಪ್ರಕಾಶಾನಂದ ಸ್ವಾಮೀಜಿ, ಸಿದ್ಧೇಶ್ವರಿ ಮಾತೆ, ಪ್ರಬೋಧಾನಂದಗಿರಿ ಸ್ವಾಮೀಜಿ,ಶರಣಾನಂದ ಸ್ವಾಮೀಜಿ, ಮಾತೆ ಜ್ಞಾನೇಶ್ವರಿ, ಮಾತೆ ಸುಶಾಂತಾ, ಮಾತೆ ಸಂಗೀತಾ, ಮಾತೆ ರಾಜೇಶ್ವರಿ, ಮಾತೆ ಶಶಿಕಲಾ, ಮಾತೆ ಸಂಪೂರ್ಣನಂದಮಯಿ, ಮಾತೆ ಅಮೃತಾನಂದ, ಮಾತೆ ನಿರಂಜನಾನಂದಮಯಿ, ಮಾತೆ ಮೇಘಾ, ಗೋಪಾಲಶಾಸ್ತ್ರಿ, ಸಾಧಕರಾದ ಮನೋಜ, ಸಿದ್ಧು ಉಪಸ್ಥಿತರಿದ್ದರು.

### ರಾಣೆಮ್ಮ, ನಿತಿನ್ ರಾಜ್ಯಮಟ್ಟದ ಮಕ್ಕಳ ಹಕ್ಕುಗಳ ಸಂಸತ್‌ಗೆ ಆಯ್ಕೆ

## ಮಕ್ಕಳ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದ ಸಂಸತ್

ಬೀದರ್.ನ.11:ಇಲ್ಲಿಯ ವಿದ್ಯಾನಗರ ಕಾಲೊನಿಯ ಜೀಜಾಮಾತಾ ಕನ್ಯಾ ಪ್ರೌಢ ಶಾಲೆಯಲ್ಲಿ ಸೋಮವಾರ ನಡೆದ ಜಿಲ್ಲಾಮಟ್ಟದ ಮಕ್ಕಳ ಹಕ್ಕುಗಳ ಸಂಸತ್ ಮಕ್ಕಳು ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿತು.ಸಂಸತ್‌ನಲ್ಲಿ ಮಕ್ಕಳು ತಮ್ಮ ಅಭಿಪ್ರಾಯವನ್ನು ಮುಕ್ತವಾಗಿ ವ್ಯಕ್ತಪಡಿಸಿದರು. ವಿವಿಧ ಸಮಸ್ಯೆ ಪ್ರಸ್ತಾಪಿಸುವ ಜತೆಗೆ,ಅನೇಕ ಬೇಡಿಕೆಗಳನ್ನೂ ಮಂಡಿಸಿದರು.

ಮಕ್ಕಳಲ್ಲಿ ಗಂಡು–ಹೆಣ್ಣು, ಕನ್ನಡ–ಆಂಗ್ಲ ಮಾಧ್ಯಮ ತಾರತಮ್ಯ ಮಾಡಬಾರದು. ಆಟದ ಮೈದಾನ, ಪ್ರಯೋಗಾಲಯ ಸೇರಿದಂತೆ ಶಾಲೆಗಳಲ್ಲಿ ಅಗತ್ಯ ಮೂಲ ಸೌಕರ್ಯ ಕಲ್ಪಿಸಬೇಕು. ಅಪೌಷ್ಟಿಕತೆ ನಿವಾರಣೆಗೆ ವಿಶೇಷ ಕಾಳಜಿ ವಹಿಸಬೇಕು. ಸಮಾಜವನ್ನು ಬಾಲ್ಯ ವಿವಾಹ ಮುಕ್ತಗೊಳಿಸಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಇಟ್ಟರು. ಮಕ್ಕಳ ಸುರಕ್ಷತೆಗೆ ಕ್ರಮ ಕೈಗೊಳ್ಳಬೇಕು ಎಂಬ ಹಕ್ಕೊತ್ತಾಯ ಸಹ ಮಾಡಿದರು.ಮಕ್ಕಳ ಸಂಸತ್‌ನಲ್ಲಿ ಪರಿಣಾಮಕಾರಿಯಾಗಿ ವಿಷಯ ಮಂಡಿಸಿದ ಕಮಠಾಣ ಸರ್ಕಾರಿ ಪ್ರೌಢಶಾಲೆಯ 9ನೇ ತರಗತಿ ವಿದ್ಯಾರ್ಥಿನಿ ರಾಣೆಮ್ಮ ಶಂಕರ ಹಾಗೂ ಬೀದರ್‌ನ ಸಾಯಿ ಪ್ರೌಢಶಾಲೆಯ ನಿತಿನ್ ರಾಜ್ಯಮಟ್ಟಕ್ಕೆ ಆಯ್ಕೆಯಾದರು.

ಸಂಸತ್‌ಗೆ ಚಾಲನೆ ನೀಡಿದ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷ ಸೀಮಪ್ಪ ಬಿ.ಸರಕುರೆ ಅವರು, ಅತಿಯಾದ ಮೊಬೈಲ್ ಬಳಕೆಯಿಂದ ಮಕ್ಕಳ ಮೇಲೆ ದುಷ್ಪರಿಣಾಮ ಆಗುತ್ತಿದೆ. ಮಕ್ಕಳನ್ನು ಮೊಬೈಲ್‌ನಿಂದ ದೂರ ಇರಿಸಬೇಕು ಎಂದು ಹೇಳಿದರು.ಅರಳು ಸಂಸ್ಥೆಯ ಅಧ್ಯ ಕ್ಷ ಕೆ.ಟಿ. ಮೆರಿಲ್ ಅವರು, ಮಕ್ಕಳ ಬದುಕುವ, ರಕ್ಷಣೆ, ಭಾಗವಹಿಸುವ ಹಾಗೂ ಬೆಳವಣಿಗೆ ಹಕ್ಕು ರಕ್ಷಣೆ ಎಲ್ಲರ ಹೊಣೆಯಾಗಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಶಿವ ಛತ್ರಪತಿ ಸ್ಮಾರಕ ಸಮಿತಿಯ ಕಾರ್ಯದರ್ಶಿ ಸತೀಶ ಮುಳೆ ಅವರು, ಶಿಕ್ಷಣದ ಜತೆಗೆ ಮಕ್ಕಳ ಆರೋಗ್ಯ ಪೂರ್ಣ ಬೆಳವಣಿಗೆ ಆಗಬೇಕು ಎಂದು ಹೇಳಿದರು.

ಮುಖ್ಯಶಿಕ್ಷಕರಾದ ಪರಮೇಶ್ವರ ಬಿರಾದಾರ, ಅರ್ಜುನ ಧುಳೆ, ಶಿವಕುಮಾರ ಸ್ವಾಮಿ, ಐಟಿಐ ಪ್ರಾಚಾರ್ಯ ವೀರಶೆಟ್ಟಿ ಹುಡಗೆ, ಆಡಳಿತಾಧಿಕಾರಿ ಅನಿಲಕುಮಾರ ಜಾಧವ್, ದೈಹಿಕ ಶಿಕ್ಷಣ ಶಿಕ್ಷಕ ಸಂಜಯ್ ಪಾಟೀಲ ಇದ್ದರು. ಅರಳು ಸಂಸ್ಥೆಯ ನಿರ್ದೇಶಕಿ ಸುನೀತಾ ನಿರೂಪಿಸಿದರು.

ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ, ಚೈಲ್ಡ್ ರೈಟ್ಸ್ ಟ್ರಸ್ಟ್ ಹಾಗೂ ಅರಳು ಸಂಸ್ಥೆಯ ವತಿಯಿಂದ ಸಂಸತ್ ಹಮ್ಮಿಕೊಳ್ಳಲಾಗಿತ್ತು.



# ವಾಡಿ ಬಿಜೆಪಿ ಕಚೇರಿಯಲ್ಲಿ ಕನಕದಾಸರ ಜಯಂತಿ ಆಚರಣೆ

ವಾಡಿ:ನ.11:ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಭಕ್ತ ಕನಕದಾಸರ ಜಯಂತಿ ಪ್ರಯುಕ್ತ ಮುಖಂಡರು ಕನಕದಾಸರ ಭಾವಚಿತ್ರಕ್ಕೆ ಭಕ್ತಿ ನಮನ ಸಲ್ಲಿಸಿ ಆಚರಿಸಿದರು.ಈ ವೇಳೆ ಬಿಜೆಪಿ ಶಕ್ತಿ ಕೇಂದ್ರದ ಅಧ್ಯಕ್ಷ ವೀರಣ್ಣ ಯಾರಿ ಅವರು ಮಾತನಾಡಿ ಕನಕದಾಸರು ದಾಸ ಸಾಹಿತ್ಯದಲ್ಲಿ ಉನ್ನತ ಮತ್ತು ವಿಶಿಷ್ಟವಾದ ವ್ಯಕ್ತಿತ್ವ ಹೊಂದಿದ್ದರು ಎಂದರು.



ಜಾತಿ, ಮತ, ಧರ್ಮ ಭೇದಭಾವ ವಿರೋಧಿಸಿ ಮನುಷ್ಯ ಜಾತಿಯೊಂದೇ ಎಂದು ಸಾರಿದರು. ಶ್ರೀ ಹರಿಯ ವಿವಿಧ ಅವತಾರಗಳನ್ನು ತಮ್ಮ ಕೀರ್ತನೆಗಳಲ್ಲಿ ಹಾಡಿ ಹೊಗಳಿದ್ದಾರೆ. ಮೂಢನಂಬಿಕೆಗಳನ್ನು ಬಲವಾಗಿ ಖಂಡಿಸುತ್ತಿದ್ದರು. ಹರಿಭಕ್ತಿ ಸಾರ ಎಂಬ ಕೃತಿಯನ್ನು ಬರೆದ ಕನಕದಾಸರು, ತನ್ನದೇ ಶೈಲಿಯಲ್ಲಿ 'ಕಾಗಿನೆಲೆಯ ಆದಿಕೇಶವನನ್ನು' ಅಂಕಿತವಾಗಿರಿಸಿ ತನ್ನ ಭಕ್ತಿ ಗೀತೆಗಳನ್ನು, ದಾಸರಪದಗಳನ್ನು ರಚಿಸಿದರು. ಯುದ್ಧ,ದೊಂಬಿ, ವೈರಿ ಆಸ್ತಿ, ಅಂತಸ್ತು ಎಲ್ಲವನ್ನೂ ತ್ಯಜಿಸಿ ದಾಸಶ್ರೇಷ್ಠರಾಗಿ ಹಲವಾರು ಅನುಯಾಯಿಗಳಿಗೆ ದಾಸದೀಕ್ಷೆ ನೀಡಿದರು. ತನಗೆ ಅಶರೀರವಾಣಿಯಂತೆ ತಾನು ದಾಸನಾಗಿರುವೆ, ಯಾವ ಮೋಹ, ಸಂಸಾರ ಬಂಧನ ಬೇಡವೆಂದವರು. ಕಾಗಿನೆಲೆಯಲ್ಲಿ ಆದಿಕೇಶವನ ಮಂದಿರವನ್ನು ಕಟ್ಟಿಸಿದವರು. ವಿಜಯನಗರ ಸಾಮ್ರಾಜ್ಯದ ಅಧೀನರಾಗಿದ್ದ ಹೋಬಳಿಯಲ್ಲಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ಸಿಕ್ಕಿದ ನಿಧಿಯನ್ನು ಮಂದಿರ ನಿರ್ಮಾಣಕ್ಕೆ ಬಳಸಿದರು. ಇವರ ರಚನೆಗಳು ಹರಿಭಕ್ತಿ ಸಾರ ಮೊದಲಕೃತಿ, ಮೋಹನ ತರಂಗಿಣಿ, ನಳ ಚರಿತ್ರೆ, ರಾಮಧ್ಯಾನ ಚರಿತೆ ಕಾವ್ಯಗಳನ್ನು, ಸಾವಿರಾರು ಕೀರ್ತನೆಗಳನ್ನು ರಚಿಸಿದ್ದಾರೆ. ತಮ್ಮ ಎಲ್ಲಾ ರಚನೆಗಳಲ್ಲೂ ಆಧ್ಯಾತ್ಮಿಕ ಸಂದೇಶವನ್ನು ಜನ ಸಾಮಾನ್ಯನಿಗೆ ಮನಮುಟ್ಟುವಂತೆ ಬಿಂಬಿಸಿ,ಭಕ್ತಿಯ ಮತ್ತು ಆಧ್ಯಾತ್ಮಿಕ ಶಕ್ತಿಯಿಂದ ಪರಮಾತ್ಮ ಪ್ರಾಪ್ತಿ ಖಚಿತವೆಂದು ತಮ್ಮ ಸಂದೇಶದಲ್ಲಿ ಹೇಳಿದ್ದಾರೆ ಎಂದರು.

ಈ ಸಂಧರ್ಭದಲ್ಲಿ ಶಕ್ತಿ ಕೇಂದ್ರದ ಪ್ರಧಾನ ಕಾರ್ಯದರ್ಶಿ ರವಿ ನಾಯಕ, ಮುಖಂಡರಾದ ಭೀಮಶಾ ಜೀರೊಳ್ಳಿ,ಹರಿ ಗಲಾಂಡೆ,ಶರಣಗೌಡ ಚಾಮನೂರ,ಭೀಮರಾವ ದೊರೆ,ಶಿವಶಂಕರ ಕಾಶೆಟ್ಟಿ, ಪ್ರಕಾಶ ಪುಜಾರಿ,ಕಿಶನ ಜಾಧವ,ಅಂಬದಾಸ ಜಾಧವ ,ಸುಭಾಷ ರದ್ದೆವಾಡಿ ಚಾಮನೂರ, ಮಹೇಂದ್ರ ಕುಮಾರ ಪುಜಾರಿ,ಮಲ್ಲಿಕಾರ್ಜುನ ಸಾತಖೇಡ,ರವಿ ಚವ್ಹಾಣ, ಸೂರಜ್ ರಾಠೊಡ,ಯಂಕಮ್ಮ ಗೌಡಗಾಂವ,ನಿರ್ಮಲ ಇಂಡಿ,ಉಮಾಭಾಯಿ ಗೌಳಿ ಸೇರಿದಂತೆ ಇತರರು ಇದ್ದರು.

# ಸರ್ಕಾರಿ ವೈದ್ಯಕೀಯ ಕಾಲೇಜಿಗೆ ಆಗ್ರಹಿಸಿ ಮುಂದುವರಿದ ಧರಣಿ: ರೈತ ಸಂಘದ ಬೆಂಬಲ

ವಿಜಯಪುರ,ನ.11: ವಿಜಯಪುರಕ್ಕೆ ಸರ್ಕಾರಿ ವೈದ್ಯಕೀಯ ಕಾಲೇಜು ಬೇಕು ಎಂದು ಆಗ್ರಹಿಸಿ ನಗರದ ಅಂಬೇಡ್ಕರ್ ವೃತ್ತದಲ್ಲಿ ಕೈಗೊಂಡ ಅನಿರ್ದಿಷ್ಟ ಧರಣಿ ಸತ್ಯಾಗ್ರಹ 54ನೇ ದಿನಕ್ಕೆ ಕಾಲಿಟ್ಟಿದ್ದು, ಹೋರಾಟಕ್ಕೆ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷರು, ರಾಜ್ಯ ಪದಾಧಿಕಾರಿಗಳು, ಜಿಲ್ಲಾ ಪದಾಧಿಕಾರಿಗಳು ಹೋರಾಟಕ್ಕೆ ಬೆಂಬಲ ಸೂಚಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ್ ನಾಗೇಂದ್ರ ಅವರು ಮಾತನಾಡಿ "ಉದ್ದೇಶ ಒಳ್ಳೆದಿದೆ. ಜನರ ಹಿತವಿದೆ. ಅದಕ್ಕೆ ಜನ ಹೋರಾಟವನ್ನು ಪ್ರಾರಂಭ ಮಾಡಿದ್ದಾರೆ. ಬಸವಣ್ಣ ಹುಟ್ಟಿದಂತ ನಾಡಿದು. ಇವತ್ತಿನ ಶಿಕ್ಷಣ ಹಾಗೂ ಆರೋಗ್ಯ ಸರ್ಕಾರದ ಕೈಯಲ್ಲಿ ಇರಬೇಕು. ಖಾಸಗಿ ಅವರ ಕೈಯಲ್ಲಿ ಹೋಗಿ ಇವತ್ತಿನ ಶಿಕ್ಷಣ ಹದಗೆಟ್ಟಿದೆ. ಆರೋಗ್ಯ ಕ್ಷೇತ್ರ ಕೂಡ ಹದಗೆಟ್ಟಿದೆ. ಇಂಥ ಒಂದು ದೊಡ್ಡ ಜಿಲ್ಲೆಯಲ್ಲಿ ಸಾಕಷ್ಟು ಅವಕಾಶ ಇದೆ. ಸರ್ಕಾರಿ ಆಸ್ಪತ್ರೆ ಮಂಜೂರು ಆದ ಜಿಲ್ಲೆಯಲ್ಲಿ ಕೂಡ ಜಾಗ ಇಲ್ಲದೇ ನನೆಗುದಿಗೆ ಬಿದ್ದಿದೆ. ಇಲ್ಲಿ 153 ಎಕರೆ ಜಾಗ ಇದೆ. ಆಸ್ಪತ್ರೆ ಇದೆ. ಇನ್ನೂ ವಿಸ್ತರಣೆ ಮಾಡಿ ಸಂಪೂರ್ಣ ಸರ್ಕಾರಿ ಆಸ್ಪತ್ರೆ ಮಾಡಬೇಕು ಎಂದರು.

ಎರಡು ದಿನಗಳಲ್ಲಿ ರೈತ ಸಂಘದಿಂದ ಮುಖ್ಯಮಂತ್ರಿ ಅವರಿಗೆ ಭೇಟಿ ಮಾಡಿ ನಿಮ್ಮ ಹೋರಾಟದ ಉದ್ದೇಶ ಹಾಗೂ ಸರ್ಕಾರಿ ಕಾಲೇಜಿನ ಅವಶ್ಯಕತೆ ಹಾಗೂ ಇಲ್ಲಿರುವ ಅನುಕೂಲತೆ ಬಗ್ಗೆ ಪತ್ರವನ್ನು ಬರೆಯುತ್ತೇನೆ ಎಂದು ಅವರು ಹೇಳಿದರು.ಕರ್ನಾಟಕ ರಾಜ್ಯ ರೈತ ಸಂಘದ ಮಹಿಳಾ ಘಟಕದ ಅಧ್ಯಕ್ಷೆ ಮಂಜುಳಾ ಅಕ್ಕಿ ಮಾತನಾಡಿ, ಹದಿಮೂರು ತಾಲೂಕಿನ ಜಿಲ್ಲೆಯಾದ ವಿಜಯಪುರದಲ್ಲಿ ಒಂದು ಸರ್ಕಾರಿ ವೈದ್ಯಕೀಯ ಕಾಲೇಜು ಇಲ್ಲ ಎಂದರು.ಹಿರಿಯ ರೈತ ಮುಖಂಡರಾದ ಪಂಚಪ್ಪ ಕಲ್ಬುರ್ಗಿ, ಕರ್ನಾಟಕ ರಾಜ್ಯ ರೈತ ಸಂಘದ ಸದಸ್ಯರಾದ ಶಿವನ ಗೌಡ ಪಾಟೀಲ್, ಶಿವನಂದ್ ಕೊಂಡಗುಲಿ, ರಾಜೇಂದ್ರ,ಭೀಮರಾಯ ಪೂಜಾರಿ, ರವಿಕುಮಾರ್, ಗಂಗಪ್ಪ ಮೈತ್ರಿ, ಬಸನಗೌಡ, ಶಬ್ಬೀರ್ ಪಟೇಲ್ ಬಿರಾದಾರ್, ಮಹದೇವಪ್ಪ ತೇಲಿ, ಬಸವರಾಜ್ ರೆಡ್ಡಿ,ಜಯಸಿಂಗ್ ರಜಪೂತ್, ರಾಜೇಸಾಬ್ ನದಾಫ್, ಅಮ್ಮೋಗಿ ಉಕ್ಕಲಿ, ಡಿ.ಎಂ. ನದಾಫ್, ಲಾಯಪ್ಪ ಇಂಗಳೆ, ಪ್ರಭುಲಿಂಗ ಕಾರಜೋಳ, ಸಂತೋಷ್ ಚವ್ಹಾಣ್, ಹನುಮಂತ ಹಾಗೂ ಹೋರಾಟ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.



# ಸಿಐಟಿಯು ಆರನೇ ಜಿಲ್ಲಾ ಸಮ್ಮೇಳನ ಯಶಸ್ವಿ

ವಿಜಯಪುರ,ನ.11: ವಿಜಯಪುರ ಸಿಐಟಿಯು ಆರನೇ ಜಿಲ್ಲಾ ಸಮ್ಮೇಳನ ನಗರದ ಜಿಲ್ಲಾ ಸಹಕಾರಿ ಯೂನಿಯನ್ ಕೇಂದ್ರ ಬಸ್ ನಿಲ್ದಾಣ ಎದುರುಗಡೆ ನಡೆಯಿತು.



ಪ್ರತಿನಿಧಿಗಳ ಸಭೆಯನ್ನು ಉದ್ಘಾಟಿಸಿದ ಸಿಐಟಿಯು ನ ರಾಜ್ಯ ಕಾರ್ಯದರ್ಶಿ ಎಚ್. ಎಸ್. ಸುನಂದ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ದುಡಿಮೆಯ ಸಮಯವನ್ನು ಹೆಚ್ಚಿಗೆ ಮಾಡಿದೆ. ಆದರೆ ಅದಕ್ಕೆ ತಕ್ಕಂತೆ ಕೂಲಿಯನ್ನು ಕೊಡುವುದಿಲ್ಲ, ಕನಿಷ್ಠ ಕೂಲಿ ಅಸಂಘಟಿತ ಕಾರ್ಮಿಕರಿಗೆ 36 ಸಾವಿರ ರೂಪಾಯಿ ಕೊಡಬೇಕು, 2011 ರಿಂದ ಇಲ್ಲಿಯವರೆಗೆ ಅಂಗನವಾಡಿ ಅಕ್ಷರ ದಾಸೋಹ ನೌಕರರಿಗೆ ಕೇಂದ್ರ ಸರ್ಕಾರ ಶೇ. 50ರಷ್ಟು ಕಡಿತಗೊಳಿಸಿದೆ. ಜನರಲ್ಲಿ ಬದುಕಿನ ಪ್ರಶ್ನೆಗಳನ್ನು ಹೇಳದೆ ಜಾತಿ ಧರ್ಮದ ಹೆಸರಿನಲ್ಲಿ ಆರೋಗ್ಯಕರ ಸಮಾಜವನ್ನು ಹಾಳು ಮಾಡುತ್ತಿದೆ. ಕಾರ್ಮಿಕರ ಕಾನೂನುಗಳನ್ನು 49 ಇದ್ದ ಕಾನೂನುಗಳನ್ನು 4 ಸಂಹಿತೆಗಳನ್ನಾಗಿ ಮಾಡಿ ಮಾಲೀಕರಿಗೆ ಅನುಕೂಲ ಮಾಡಿದೆ. ಈ ಕಾನೂನುಗಳು ಜಾರಿಯಾಗದಂತೆ ಸಂಘಟಿತ ಹೋರಾಟ ಮಾಡುವುದು ಅವಶ್ಯಕವಾಗಿದೆ ಎಂದರು.

ಅಂಗನವಾಡಿ ಬಿಸಿಯೂಟ ನೌಕರರಿಗೆ ಪಿಂಚಣಿ ಕೊಡಬೇಕು. ಎಷ್ಟು ಜನ ಶ್ರೀಮಂತರಾಗುತ್ತಾರೆ ಅಷ್ಟೇ ಪ್ರಮಾಣ ಬಡವರ ಸಂಖ್ಯೆ ಹೆಚ್ಚಾಗುತ್ತಿದೆ. ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ. ಎಫ್ ಆರ್ ಎಸ್ ಜಾರಿಯಿಂದ ಎರಡು ಲಕ್ಷ ಗರ್ಭಿಣಿ ಮಹಿಳೆಯರು ಸೌಲಭ್ಯದಿಂದ ವಂಚಿತರಾಗಿದ್ದಾರೆ. ನವೆಂಬರ್ 1, 2025 ರವರೆಗೆ ಎಂಪಿ ಗಳಿಗೂ ಮನವಿ ಸಲ್ಲಿಸುವುದು, ನಂತರ ಕೇಂದ್ರ ಸಚಿವರ ಮನೆಯ ಮುಂದೆ ಧರಣಿ ಮಾಡಲಾಗುವುದು ಎಂದು ಹೇಳಿದರು. ಕೇಂದ್ರ ಸರಕಾರ 1,46,000 ಕೋಟಿ ಬಂಡವಾಳಗಾರರ ಸಾಲ ಮನ್ನಾ ಮಾಡಿದೆ.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಿಐಟಿಯು ಸಂಘಟನೆಯ ಜಿಲ್ಲಾ ಅಧ್ಯಕ್ಷ ಅಣ್ಣಾರಾಯ ಈಳಗೇರ ಮಾತನಾಡಿ, ಜಿಲ್ಲೆಯಲ್ಲಿರುವ ಕಾರ್ಮಿಕರ ಸ್ಥಿತಿ ಹಾಗೂ ಜಿಲ್ಲೆಯಲ್ಲಿ ಪಿಪಿಪಿ ವೈದ್ಯಕೀಯ ಕಾಲೇಜು ಹೋರಾಟದ ಕುರಿತು ವಿವರಿಸಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಲಕ್ಷ್ಮಣ ಹಂದ್ರಾಳ ಅವರು ಸಿಐಟಿಯು ಸಂಘಟನೆ ಮೂರು ವರ್ಷಗಳ ಕಾಲ ಮಾಡಿದ ಅನೇಕ ಜನಪರ ಕಾರ್ಮಿಕರ ಚಳುವಳಿಯ ಕರಡು ವರದಿಯನ್ನು ಮಂಡಿಸಿದರು. ಅದನ್ನು ಎಲ್ಲ ಕಾರ್ಮಿಕ ಸಂಘಟನೆಯ ಪ್ರತಿನಿಧಿಗಳು ಅನುಮೋದನೆ ಮಾಡಿದರು. ಸಮ್ಮೇಳನಕೆ ಶುಭಕೋರಿ ನಿವೃತ್ತ ನೌಕರರ ಒಕ್ಕೂಟದ ಮುಖಂಡ ಸುರೇಶ ಜಿಬಿ ಅವರು, ಪ್ರಜಾ ಪ್ರಭುತ್ವದ ಉಳಿವಿಗಾಗಿ ಹೋರಾಟ ಮಾಡಬೇಕೆಂದರು. ಜನವಾದಿ ಮಹಿಳಾ ಸಂಘಟನೆಯ ಸುರೇಖಾ ರಜಪೂತ, ಗ್ರಾಮ ಪಂಚಾಯಿತಿಯ ನೌಕರರ ಸಂಘದ ಮಾಜಿ ಅಧ್ಯಕ್ಷ ಎಸ್.ಐ. ಗದಿಗಿಮಠ, ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಚಂದ್ರಶೇಖರ ಬುರಣಾಪುರ ಶುಭಕೋರಿ ಮಾತನಾಡಿದರು.

ಸಮ್ಮೇಳನದಲ್ಲಿ ಗ್ರಾಮ ಪಂಚಾಯಿತಿ ನೌಕರರು, ಕಟ್ಟಡ ಕಾರ್ಮಿಕ ಸಂಘಟನೆಯ ಪ್ರತಿನಿಧಿಗಳು, ಅಕ್ಷರ ದಾಸೋಹ ನೌಕರರು, ಅಂಗನವಾಡಿ ನೌಕರರು ಭಾಗವಹಿಸಿದ್ದರು.ಇದೇ ಸಂದರ್ಭದಲ್ಲಿ 12 ಜನರ ಸಂಚಾಲಕ ಸಮಿತಿ ರಚಿಸಲಾಯಿತು. ಸಂಚಾಲಕರಾಗಿ ಲಕ್ಷ್ಮಣ ಹಂದ್ರಾಳ, ಸಹ ಸಂಚಾಲಕರಾಗಿ ಅಣ್ಣಾರಾಯ, ಸೋಮಪ್ಪ ಆಯಟ್ಟಿ, ಸುರೇಶ ಜಿ.ಬಿ, ಸುನಂದ ನಾಯಕ, ಭಾರತಿ ವಾಲಿ, ಅಶ್ವಿನಿ ತಲ್ವಾರ್ , ಸುಮಂಗಲ ಆನಂದಿಶೆಟ್ಟಿ, ಕಾಳಮ್ಮ ಬಡಿಗೇರ, ಲಾಲ್ ಅಹ್ಮದ್ ಶೇಖ, ಚಂದ್ರಶೇಖರ ಬುರಣಾಪುರ ಇದ್ದರು.

# ತೊಗರಿ ಕಾಯಿ ಕೊರಕದ ಸಮಗ್ರ ಹತೋಟಿ ಮಾಡಿ

ಕಲಬುರಗಿ.ನ.11:ನಮ್ಮ ಜಿಲ್ಲೆಯಲ್ಲಿ ಅಧಿಕ ಮಳೆಯಾಗಿದ್ದರಿಂದ ಕೆಲವೆಡೆ ತೊಗರಿ ಬೆಳೆ ನಾಶವಾಗಿದೆ. ಇನ್ನೂ ಕೆಲವು ಕಡೆ ಬೆಳೆಗೆ ಗೊಡ್ಡು, ಹಳದಿ ಬಣ್ಣಕ್ಕೆ ತಿರುಗಿರುವುದು, ಕಪ್ಪು ಚುಕ್ಕೆ ರೋಗದ ಜೊತೆ ಕೀಟಗಳ ಬಾಧೆ ಕಂಡುಬರುತ್ತಿದೆ. ಆದ್ದರಿಂದ ಕೀಟಗಳ ನಿಯಂತ್ರಣ, ಪೋಷಕಾಂಶ ನಿರ್ವಹಣೆ, ಪಲ್ಸ್ ಮ್ಯಾಜಿಕ್ ನಂತಹ ಪೋಷಕಾಂಶ ಮಿಶ್ರಣವನ್ನು ಬಳಸಿ, ಇದು ಬೆಳೆ ಬೆಳವಣಿಗೆಯನ್ನು ಹೆಚ್ಚಿಸಿ, ಹೂವು ಮತ್ತು ಕಾಯಿ ಉದುರುವುದನ್ನು ತಡೆಯಬೇಕು ಎಂದು ನಿವೃತ್ತ ಕೃಷಿ ಅಧಿಕಾರಿ ಶಿವಯೋಗೆಪ್ಪಾ ಎಸ್. ಬಿರಾದಾರ ರೈತರಿಗೆ ಸಲಹೆ ನೀಡಿದರು. ಸುಂಟನೂರ ಗ್ರಾಮದ ಹೊಲವೊಂದರಲ್ಲಿ ಕಲಬುರಗಿಯ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಶನಿವಾರ ಸಾಯಂಕಾಲ ಜರುಗಿದ 'ತೊಗರಿ ಬೆಳೆ ಕ್ಷೇತ್ರ ಭೇಟಿ, ವೀಕ್ಷಣೆ ಹಾಗೂ ರೈತರಿಗೆ ಸಲಹೆಗಳು' ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಕೀಟ ಮತ್ತು ರೋಗ ನಿರ್ವಹಣೆ,ತೇವಾಂಶ ಕೊರತೆಯಿದ್ದರೆ ಅದನ್ನು ಕಾಪಾಡುವುದು, ರಾಸಾಯನಿಕ ಸಿಂಪಡಣೆಯ ಸಸ್ಯ ಪ್ರಚೋದಕ ನ್ಯಾಪ್ಥಲೀನ್ ಅಸಿಟಿಕ್ ಆಸಿಡ್ (0.5 ಮಿ.ಲೀ./ಲೀಟರ್) ಮತ್ತು ಕಾರ್ಬನ್‌ಡೈಜಿಮ್ ಶಿಲೀಂಧ್ರನಾಶಕ (1 ಗ್ರಾಂ/ಲೀಟರ್) ಅನ್ನು ಬೆರೆಸಿ ಸಿಂಪಡಿಸಬೇಕು. ಕಾಯಿ ಕೊರಕ ನಿಯಂತ್ರಣಕ್ಕೆ ಸೂಕ್ತವಾದ ಕೀಟನಾಶಕವನ್ನು ಸಹ ಇದರೊಂದಿಗೆ ಸೇರಿಸಬಹುದು.ಎಲೆಚುಕ್ಕೆ ರೋಗದ ಲಕ್ಷಣಗಳು ಕಂಡುಬಂದ ಕೂಡಲೇ ಕೀಟನಾಶಕ ಸಿಂಪಡಣೆ ಮಾಡಬೇಕು. ಸಂಪೂರ್ಣವಾಗಿ ಹೂ ಬಿಡುವ ಸಮಯದಲ್ಲಿ ಸಿಂಪಡಿಸುವುದರಿಂದ ಉತ್ತಮ ಫಲಿತಾಂಶ ಪಡೆಯಬಹುದು ಎಂದರು.

ಬಂಜೆರೋಗವನ್ನು ಆರಂಭಿಕ ಹಂತದಲ್ಲಿ ಗುರುತಿಸಿ ಹತೋಟಿ ಕ್ರಮ ಕೆ?ಗೊಂಡರೆ ಮಾತ್ರ ರೋಗ ನಿರ್ವಹಿಸಬಹುದು. ತಡವಾದರೆ ಯಾವುದೇ ಕ್ರಮದಿಂದಲೂ ರೋಗ ನಿಯಂತ್ರಣ ಸಾಧ್ಯವಿಲ್ಲ. ಬಂಜೆರೋಗ ನಂಜಾಣು ರೋಗವಾಗಿದ್ದು, ಯಾವುದೇ ರಾಸಾಯನಿಕಗಳಿಂದ ಹತೋಟಿ ಮಾಡಲಾಗದು. ಆದರೆ ರೋಗ ಹರಡುವ ಎರಿಯೋಪೆ?ಡ್ ಜಾತಿಯ ನುಸಿಗಳನ್ನು ಕ್ರಿಮಿನಾಶ ಸಿಂಪಡಿಸಿ ಹತೋಟಿ ಮಾಡಬಹುದು. ಆದ್ದರಿಂದ ರೈತರು ರೋಗ ಕಾಣಿಸಿಕೊಂಡ ಪ್ರದೇಶದ ಎಲ್ಲಾ ರೈತರು ಸಸ್ಯ ಸಂರಕ್ಷಣಾ ಕ್ರಮ ಕೈಗೊಳ್ಳಬೇಕು. ರೋಗ ಸೋಂಕಿದ್ದ ಗಿಡಗಳು ಹೂ ಬಿಡುವುದಿಲ್ಲ. ತಡವಾಗಿ ರೋಗ ತಗಲಿದ ಗಿಡಗಳಲ್ಲಿ ಹೂ ಬಿಟ್ಟರೂ ಕೂಡ ಕಾಯಿ ಕಟ್ಟುವುದಿಲ್ಲ. ಕಾಯಿ ಬಲಿಯುವುದಿಲ್ಲ. ಕಾಯಿ ಬಲಿತರೂ ಕಾಳುಗಳ ಬಣ್ಣ ಬದಲಾಗಿ ಜೊಳ್ಳಾಗುವುದು. ತೊಗರಿ ಬೆಳೆಯಲ್ಲಿ ಬಂಜೆರೋಗ ಸಸಿಗಳ ಹಂತದಲ್ಲಿ ಅಂದರೆ 45 ದಿವಸಗಳೊಳಗೆ ಕಾಣಿಸಿಕೊಂಡರೆ ರೋಗ ಪೀಡಿತ ಗಿಡದಲ್ಲಿ ಇಳುವರಿ ಶೇ.95 ರಿಂದ 100ರಷ್ಟು ಕುಂಠಿತವಾಗುತ್ತದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಬಳಗದ ಅಧ್ಯಕ್ಷ ಎಚ್.ಬಿ.ಪಾಟೀಲ್, ಸಮಾಜ ಸೇವಕ ಡಾ.ರಾಜಶೇಖರ ಪಾಟೀಲ್, ಅಸ್ಲಾಂ ಶೇಖ್, ದೌಲತರಾವ್, ಮಲ್ಲಿಕಾರ್ಜುನ, ಶಂಕರ ಸೇರಿದಂತೆ ಇನ್ನಿತರರಿದ್ದರು.





# ಧರಣಿ ನಿರತ ಹೋರಾಟ ಸ್ಥಳಕ್ಕೆ ಎಸಿ ಅನುರಾಧಾ ಭೇಟಿ : ಹೋರಾಟ ಅಂತ್ಯ



ಇಂಡಿ:ನ.11:ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಕಬ್ಬು ಬೆಳೆ ರೂ 3300 ಬೆಲೆ ನೀಡಬೇಕೆಂಬ ಕರ್ನಾಟಕ ರಾಜ್ಯ ರೈತ ಸಂಘದಿಂದ ನಡೆದ ಅನೀರ್ದಿಷ್ಟ ಧರಣಿ ಸತ್ಯಾಗ್ರಹ ಇಂದು ಅಂತ್ಯಗೊಂಡಿದೆ

ಇಂದು ಕಂದಾಯ ಉಪವಿಬಾಗಾಧಿಕಾರಿ ಅನುರಾಧಾ ವಸ್ತ್ರದರವರು ಹೋರಾಟ ಸ್ಥಳಕ್ಕೆ ಭೇಟಿ ನೀಡಿ ಜಿಲ್ಲಾಧಿಕಾರಿಗಳು ನೀಡಿದ ಆದೇಶ ಪ್ರತಿಯನ್ನು ನೀಡಿ ಧರಣಿ ಹಿಂದೆ ಪಡೆಯಲು ವಿನಂತಿಸಿದ ನಿಮಿತ್ಯ ಧರಣಿ ಹಿಂದೆ ಪಡೆದಿದ್ದಾರೆ.

ಎಸಿ ಅನುರಾಧಾ ವಸ್ತ್ರದರವರು ಮಾತನಾಡಿ ಕಬ್ಬಿನ ಬೆಲೆ ಕುರಿತು ಜಿಲ್ಲಾಧಿಕಾರಿಗಳು ಆದೇಶ ಪತ್ರ ನೀಡಿದ್ದು ಸರಕಾರ ರೈತರು ಬೆಳೆದ ಕಬ್ಬಿಗೆ ಬೆಲೆ ನೀಡಲು ಪ್ರಾಮಾಣಿಕ ಪ್ರಯತ್ನ ನೀಡಿದೆ. ಅದರ ಆದೇಶ ಪ್ರತಿ ತಮಗೆ ನೀಡುತ್ತಿದ್ದು ಧರಣಿ ಹಿಂದೆ ಪಡೆಯಲು ಕೇಳಿಕೊಂಡರು. ಮತ್ತು ಕಬ್ಬಿನ ತೂಕದಲ್ಲಿ ಪಾರದರ್ಶಕತೆಗೆ ಜಿಲ್ಲಾಧಿಕಾರಿಗಳ ಜತೆ ಚರ್ಚಿಸಿ ಕ್ರಮ ತೆಗೆದುಕೊಳ್ಳುವಾಗಿ ತಿಳಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಎಸ್.ಬಿ. ಕಂಬೋಗಿ ಮಾತನಾಡಿ ಇಂಡಿ ತಾಲೂಕಿನ ಭೀಮಾಶಂಕರ ಕಾರ್ಖಾನೆ ಮರಗೂರ, ಇಂಡಿಯನ ಕೇನ್ ಪಾವರ ಲಿಮಿಟೆಡ ಘಟಕ ಮೂರು ಹಿರೇಬೇವನೂರ ಸಕ್ಕರೆ ಕಾರ್ಖಾನೆ ಮತ್ತು ಜಮಖಂಡಿ ಸುರ್ಸ ಘಟಕ 2 ನಾದದ ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಗೆ ಪ್ರತಿ ಟನ್ ಗೆ ಎಷ್ಟು ಹಣ ನೀಡುತ್ತಾರೆಂದು ತಿಳಿಸಿದ ನಂತರ ರೈತರಿಗೆ ಸಮಾಧಾನವಾಗದಿದ್ದರೆ ಹೋರಾಟ ಮತ್ತೆ ಮುಂದುವರೆಸುತ್ತೇವೆ ಈಗ ತಾತ್ಪೂರ್ತಿಕ ಹಿಂದೆ ಪಡೆಯುತ್ತೇವೆ ಎಂದರು.

ಕರವೇ ಅಧ್ಯಕ್ಷ ಬಾಳು ಮುಳಜಿ ಮಾತನಾಡಿ ಹೋರಾಟ ತಾತ್ಪೂರ್ತಿಕ ಅಂತ್ಯಗೊಂಡಿದೆ.ಇಂಡಿ ತಾಲೂಕಿನ ಕಾರ್ಖಾನೆಗಳು ಎಫ್‌ಆರ್‌ಪಿ ಬೆಲೆಯ ಮೇಲೆ ಕಬ್ಬಿನ ಬೆಲೆ ನೀಡುತ್ತಾರೆ. ಸರಿಯಾದ ಬೆಲೆ ನೀಡದಿದ್ದರೆ ಮತ್ತೆ ಹೋರಾಟ ಪ್ರಾರಂಭಿಸುತ್ತೇವೆ ಎಂದರು. ಮತ್ತು ಕಂದಾಯ ಉಪವಿಬಾಗಾಧಿಕಾರಿಗಳು ತೂಕದ ಬಗ್ಗೆ ಕಾಳಜಿ ವಹಿಸಬೇಕು. ತೂಕದಲ್ಲಿ ರೈತರಿಗೆ ಮೋಸ ಆಗುತ್ತಿದೆ ಎಂದರು.

ಜೆಡಿ ಎಸ್ ಮುಖಂಡ ಬಿ ಡಿ ಪಾಟೀಲ, ಮಲ್ಲು ಗುಡ್ಲ,ಅನೀಲಗೌಡ ಬಿರಾದಾರ, ಅಯೂಬ ನಾಟಿಕಾರ, ರಾಮಸಿಂಗ ಕನ್ನೊಳ್ಳಿ ಮಾತನಾಡಿದರು.ಪ್ರತಿಭಟನೆಯಲ್ಲಿ ಸೋಮಣ್ಣ ಗುಡ್ಲೆನವರ, ಸಿದ್ದರಾಮು ತಳವಾರ, ಮಲ್ಲಿಕಾರ್ಜುನ ನಾವದಗಿ, ಮಲ್ಲೇಶಗೌಡ ಪಾಟೀಲ, ಮಹೇಶ ಹೂಗಾರ, ಮಲ್ಲಿಕಾರ್ಜುನ ಹೊರ್ತಿ, ಅದೃಷ್ಯಪ್ಪಾ ವಾಲಿ ಮತ್ತಿತರಿದ್ದರು.

# ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ ಗೀತ ಗಾಯನ ಸ್ಪರ್ಧೆ

ಜಮಖಂಡಿ:ನ.11:ಕ್ಷೇತ್ರ ಸಮನ್ವಯಾಧಿಕಾರಿಗಳ ಕಚೇರಿಯ ಸಭಾಭವನದಲ್ಲಿ ನಡೆದ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆ ವತಿಯಿಂದ ಜಮಖಂಡಿ ಮತ್ತು ರಬಕವಿ-ಬನಹಟ್ಟಿ ತಾಲೂಕುಗಳ ವ್ಯಾಪ್ತಿಯ ಕಬ್ಸ್ ಮತ್ತು ಬುಲ್ ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ರೋವರ್ ಮತ್ತು ರೇಂಜರ್ ವಿದ್ಯಾರ್ಥಿಗಳಿಗೆ 2025-26ನೇ ಸಾಲಿನ ತಾಲೂಕಾ ಮಟ್ಟದ ಗೀತ ಗಾಯನ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿತು.ಗೀತ ಗಾಯನ ಸ್ಪರ್ಧೆಯ ಆಯೋಜಕರಾದ ಭಾರತ ಸ್ಕೌಟ್ಸ್ ಮತ್ತು ಗೈಡ್ ಸ್ಥಳೀಯ ಸಂಸ್ಥೆ ಜಮಖಂಡಿಯ ಕಾರ್ಯದರ್ಶಿಯವರಾದ ಶ್ರೀ ಮಹಾವೀರ ಜಮಖಂಡಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಸ್ಪರ್ಧೆಯ ಉದ್ದೇಶ ಮತ್ತು ನಿಯಮಗಳ ಕುರಿತು ತಿಳಿಸಿದರು.

ಗೀತ ಗಾಯನ ಸ್ಪರ್ಧೆಯ ಅಧ್ಯಕ್ಷತೆ ವಹಿಸಿ, ಉದ್ಘಾಟನೆಯನ್ನು ನೆರವೇರಿಸಿದ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಎ ಕೆ ಬಸಣ್ಣವರ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ ವಿದ್ಯಾರ್ಥಿ ಜೀವನದಲ್ಲಿ ಯಶಸ್ಸನ್ನು ಸಾಧಿಸಬೇಕಾದರೆ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯಲ್ಲಿ ವಿದ್ಯಾರ್ಥಿಗಳು ತಮ್ಮನ್ನು ತೊಡಗಿಸಿಕೊಳ್ಳಬೇಕು. ಪ್ರತಿಫಲವಾಗಿ ಜೀವನದಲ್ಲಿ ಶಿಸ್ತು, ಧೈರ್ಯ ಹಾಗೂ ನಾಯಕತ್ವ ಗುಣಗಳು ಬೆಳವಣಿಗೆಯಾಗಿ ಮುಂದೆ ದೇಶಕ್ಕೆ ಒಳ್ಳೆಯ ಪ್ರಜೆಗಳಾಗುತ್ತೀರಿ ಎಂದು ತಿಳಿಸುತ್ತಾ ತಾಲೂಕಿನ ಎಲ್ಲ ಶಾಲೆಗಳಲ್ಲಿ ಸ್ಕೌಟ್ ಮತ್ತು ಗೈಡ್ಸ್ ಘಟಕಗಳನ್ನು ಸ್ಥಾಪಿಸಿ ತರಬೇತಿ ಹೊಂದಿದ ಶಿಕ್ಷಕರು ನಿಯಮಿತವಾಗಿ ವಿದ್ಯಾರ್ಥಿಗಳಿಗೆ ತರಬೇತಿ ನೀಡುವುದರೊಂದಿಗೆ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಕೈಜೋಡಿಸಬೇಕೆಂದು ಸೂಚಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ದೈಹಿಕ ಶಿಕ್ಷಣ ಪರಿವೀಕ್ಷಕಿ ಶ್ರೀಮತಿ ಪಿ ಎಸ್ ನಂದೇಶ ಹಾಗೂ ತಾಲೂಕಾ ಕರ್ನಾಟಕ ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷ ಸುರೇಶ ಬೋಸಲೆ ಅವರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಎಸ್ ಬಿ ಬೆಳ್ಳಿಕಟ್ಟಿ ಸ್ವಾಗತಿಸಿದರು ಎಸ್ ಎಸ್ ಕುಂಬಾರ ನಿರೂಪಿಸಿದರು ಮತ್ತು ಕೆ ಎಲ್ ಮಾಳಿ ವಂದಿಸಿದರು.



# ಬಯಲು ಶೌಚಕ್ಕೆ ಬೇಡಿಕೆ ಇಟ್ಟವರಿಗೆ ಅಧಿಕಾರಿಗಳಿಂದ ಬುದ್ದಿವಾದ



ತಾಳಿಕೋಟೆ:ನ.11: ಬಯಲು ಶೌಚಮುಕ್ತ ಗ್ರಾಮ ಮಾಡಲು ಸರ್ಕಾರಗಳು ಸಾಕಷ್ಟು ಅನುದಾನ ಒದಗಿಸುವದರೊಂದಿಗೆ ಪ್ರತಿ ಮನೆ ಮನೆಗೆ ಶೌಚಾಲಯ ಕಟ್ಟಿಸಿಕೊಳ್ಳಲು ಯೋಜನೆ ರೂಪಿಸಿದ್ದರೂ ಕೂಡಾ ಕೆಲವರು ಬಯಲು ಶೌಚಾಲಯ ಬೇಕು ಮಂಜೂರಾದ ನೂತನ ಆಸ್ಪತ್ರೆ ನಮಗೆ ಬೇಡಾ ಎಂಬ ಹಟಕ್ಕೆ ಬಿದ್ದವರಿಗೆ ಪೊಲೀಸ್‌ರ ಮಧ್ಯಸ್ಥಿಕೆಯಲ್ಲಿ ಅಧಿಕಾರಿ ವರ್ಗ ಬುದ್ದಿವಾದ ಹೇಳಿದ ಘಟನೆ ತಾಲೂಕಿನ ಗಡಿ ಸೋಮನಾಳ ಗ್ರಾಮದಲ್ಲಿ ರವಿವಾರರಂದು ನಡೆದಿದೆ.

ತಾಳಿಕೋಟೆ ತಾಲೂಕು ಅತೀ ಹಿಂದೂಳಿದ ತಾಲೂಕಾ ಪಟ್ಟಿಯಲ್ಲಿ ಸೇರಿದ್ದರಿಂದ ದೇವರ ಹಿಪ್ಪರಗಿ ಮತಕ್ಷೇತ್ರದ ಶಾಸಕ ರಾಜುಗೌಡ ಪಾಟೀಲ (ಕುದರಿಸಾಲವಾಡಗಿ) ಅವರು ತಮ್ಮ ಕ್ಷೇತ್ರದ ಗ್ರಾಮಗಳಿಗೆ ಅವಶ್ಯವಿರುವ ಮೂಲ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಪ್ರಾಥಮಿಕ ಚಿಕೀತ್ಸಾಲಯವನ್ನು ಕೇಂದ್ರ ಸರ್ಕಾರದ ಅಡಿಯಲ್ಲಿ ಮಂಜೂರಾತಿ ಮಾಡಿಸಿದ್ದು ಸದರಿ ಆಸ್ಪತ್ರೆ ಕಟ್ಟಲು ಅನುಮೋದನೆಗೊಂಡ ಸರ್ಕಾರಿ ಖುಲ್ಲಾ ಜಾಗೆಯನ್ನು ಇತ್ತೀಚಗೆ ಸ್ವಚ್ಚತೆ ಕೈಗೊಂಡಿದ್ದರು. ಸದರಿ ಜಾಗೆಯನ್ನು ಕೆಲವರು ಕಬಳಿಕೆ ಮಾಡುವ ದೃಷ್ಠಿಯಿಂದ ಗ್ರಾಂಪಂದ 9ನಂಬರ ಬುಕ್‌ನಲ್ಲಿ ತಮ್ಮ ಹೆಸರುಗಳನ್ನು ನೊಂದಾಯಿಸಿಕೊಂಡಿದ್ದರೆನ್ನಲಾಗಿದ್ದು ಸದರಿ ಜಾಗೆ ಕಬಳಿಕೆಯಾಗುವದನ್ನು ತಪ್ಪಿಸಲು ಆಸ್ಪತ್ರೆ ನಿರ್ಮಾಣಕ್ಕೆ ಮುಂದಾದ ಬೆನ್ನೇಲೆ ಕೆಲವು ಬರಳೆಣಿಕೆಯಷ್ಟು ಮಹಿಳೆಯರನ್ನು ಮುದಿಟ್ಟುಕೊಂಡು ಆಸ್ಪತ್ರೆ ನಿರ್ಮಾಣಕ್ಕೆ ಅಡ್ಡಿ ಪಡಿಸಲು ಮುಂದಾಗಿದ್ದರ ಪರಿಣಾಮ ತಾಳಿಕೋಟೆ ಪೊಲೀಸ್ ಠಾಣಾ ಪಿಎಸ್‌ಐ ಶ್ರೀಮತಿ ಜ್ಯೋತಿ ಖೋತ್ ಅವರ ಸಮ್ಮುಖದಲ್ಲಿ ಗ್ರಾಂಪಂ ಅಭಿವೃದ್ದಿ ಅಧಿಕಾರಿ ಬಡಿಗೇರ ಮತ್ತು ತಹಶಿಲ್ದಾರ ಶ್ರೀಮತಿ ಡಾ.ವಿನಯಾ ಹೂಗಾರ ಅವರು ಬಯಲು ಶೌಚಕ್ಕೆ ಬೇಡಿಕೆ ಇಟ್ಟವರಿಗೆ ಶಾಂತಿಯುತವಾಗಿ ತಿಳುವಳಿಕೆ ನೀಡುವದರ ಜೊತೆಗೆ ಗ್ರಾಮಸ್ಥರ ಅಭಿಪ್ರಾಯ ಸಂಗ್ರಹಣಗೆ ಮುಂದಾದರು.

ಈ ಸಮಯದಲ್ಲಿ ಗ್ರಾಮದ ಮುಖಂಡ ಮಡುಸಾಹುಕಾರ ಬಿರಾದಾರ ಅವರು ಮಾತನಾಡಿ ಗ್ರಾಮವು ಅಭಿವೃದ್ದಿ ಹೊಂದಬೇಕಾದರೆ ಎಲ್ಲ ಜನರ ಸಹಕಾರವೆಂಬುದು ಬಹಳೇ ಮುಖ್ಯವಾಗಿದೆ.

ಗ್ರಾಮದಲ್ಲಿ ಸಣ್ಣ ಪುಟ್ಟ ಕಾಯಲೆಗಳು ಬಂ ದರೂ ಕೂಡಾ ತಾಳಿಕೋಟೆ ಪಟ್ಟಣಕ್ಕೆ ಹೋಗಬೇಕಾದಂತಹ ಸಂದರ್ಬ ಇತ್ತು ಆದರೆ ಕ್ಷೇತ್ರದ ಶಾಸಕರಾದ ರಾಜುಗೌಡ ಪಾಟೀಲ ಅವರಿಗೆ ಗಡಿಸೋಮನಾಳ ಗ್ರಾಮಕ್ಕೆ ಮೂಲಭೂತ ಸೌಲಭ್ಯಗಳಲ್ಲಿಯೇ ಅತ್ಯವಶ್ಯವಾಗಿದ್ದ ಪ್ರಾಥಮಿಕ ಚಿಕೀತ್ಸಾ ಕೇಂದ್ರವನ್ನು ಪ್ರಾರಂಬಿಸುವದಕ್ಕೆ ಒತ್ತಾಯಿಸಿದ ಹಿನ್ನೆಲೆ ಗಡಿಸೋಮನಾಳ ಗ್ರಾಮಕ್ಕೆ ಆಸ್ಪತ್ರೆಯನ್ನು ಮಂಜೂರಾತಿಗೊಳಿಸಿ ಸುಮಾರು 65 ಲಕ್ಷ ರೂ. ಹಣವನ್ನು ಕೂಡಾ ಬಿಡುಗಡೆಗೊಳಿಸಿ ಆಸ್ಪತ್ರೆ ಕಟ್ಟಲು ಮುಂದಾಗಿದ್ದಾರೆ ಆದರೆ ಕೆಲವರು ಅಭಿವೃದ್ದಿ ವಿಷಯದಲ್ಲಿ ರಾಜಕಾರಣ ಮಾಡಲು ಬರುತ್ತಿರುವದು ಸರಿಯಾದುದ್ದಲ್ಲಾ ಆಸ್ಪತ್ರೆ ಎಂಬುದು ಬಡಬಗ್ಗರಿಗೆ ಉಪಯುಕ್ತವಾಗಲಿದೆ ಸದರಿ ಸ್ಥಳದಲ್ಲಿ ಕೆಲವರು ಬಯಲು ಶೌಚ ಬಯಸುತ್ತಿರುವದು ಖೇದಕರ ಸಂಗತಿಯಾಗಿದೆ ಬೇರೆ ಕಡೆ ಜಾಗದಲ್ಲಿ ಮಹಿಳೆಯರ ಅನುಕೂಲಕ್ಕಾಗಿ ಹೈಟೆಕ್ ಸಾಮೂಹಿಕ ಸೌಚಾಲಯ ನಿರ್ಮಾಣ ಮಾಡೋಣ ಈ ಆಸ್ಪತ್ರೆ ನಿರ್ಮಾಣಕ್ಕೆ ಅಡ್ಡಿಪಡಿಸಲು ಯಾರೂ ಬಡಬೇಡಿ ಎಂದು ಮನವಿ ಮಾಡಿದರು.

# ಸಂವಿಧಾನದಡಿಯಲ್ಲಿ ಪ್ರತಿಯೊಬ್ಬರೂ ಕಾನೂನು ಅರಿವು ಪಡೆದು ಆರೋಗ್ಯಕರ ಸಮಾಜ ನಿರ್ಮಾಣ ಮಾಡಲು ಮುಂದಾಗಬೇಕು:ನ್ಯಾಯಾಧೀಶ ರಾಜಶೇಖರ ಹರಸೂರ

ಜಮಖಂಡಿ:ನ.11: ಸಮಾಜದಲ್ಲಿ ಸುಕವಾಗಿ ಜೀವನ ನಡೆಸಲು ನಮ್ಮ ಭಾರತದ ಸಂವಿಧಾನವೆ ಕಾರಣ ಎಂದು ಕಾನೂನು ಸೇವಾ ಸಮೀತಿಯ ಅದ್ಯಕ್ಷ ಮತ್ತು ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶ ರಾಜಶೇಖರ ಹರಸೂರ ಹೇಳಿದರು.

ನಗರದ ಸಾಯಿನೀಕೆತನ ಪಿ.ಯು ಕಾಲೇಜಿನ ಸಭಾ ಭವನದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬಾಗಲಕೋಟೆ ತಾಲೂಕು ಕಾನೂನು ಸೇವಾ ಸಮಿತಿ ಜಮಖಂಡಿ, ನ್ಯಾಯವಾದಿಗಳ ಸಂಘ ಜಮಖಂಡಿ, ಸಾಯಿನಿಕೇತನ ಪ.ಪೂ ಕಾಲೇಜು, ಜಮಖಂಡಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ. ಜಮಖಂಡಿ ಇವರುಗಳ ಸಂಯುಕ್ತ ಆಶ್ರಯದಲ್ಲಿ "ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ" ಕುರಿತು ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಜೀವನದಲ್ಲಿ ಎಲ್ಲರಿಗೂ ಕಷ್ಟಗಳು ಇರುತ್ತವೆ ತಕ್ಕ ಮಟ್ಟಿಗೆ ಸುಕವಾದ ಒಂದು ಶಾಂತಿಯುತವಾಗಿ ಜೀವನವನ್ನು ಏನಾದರು ನಡೆಸುತ್ತಾ ಇದ್ದಿವಿ ಅಂದರೆ ಅದಕ್ಕೆ ನಮ್ಮ ಭಾರತದ ಸಂವಿಧಾನವೆ ಕಾರಣ ಎಂದರು. ಭಾರತದ ಸಂವಿಧಾನದ ಮೂಲಭೂತ ಹಕ್ಕುಗಳ ಅಡಿಯಲ್ಲಿ ನಾವುಗಳು ಎಲ್ಲ ರೀತಿಯಿಂದ ಚನ್ನಾಗಿ ಇದ್ದಿವಿ ನಮ್ಮ ದೇಶಕ್ಕೆ ಮತ್ತು ಸಂವಿಧಾನಕ್ಕೆ ಕೃತಜ್ಞತೆ ಸಲ್ಲಿಸಬೇಕು ಎಂದರು.

1987ರಲ್ಲಿ ಉಚಿತ ಕಾನೂನು ಸೇವೆ ಕಾಯಿದೆ ರೂಪುಗೊಂಡರೂ, ಜಾರಿಗೆ ಬಂದಿದ್ದು 1995ರಲ್ಲಿ. ಪ್ರಸ್ತುತ ತಾಲೂಕು, ಜಿಲ್ಲೆ , ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಕಾನೂನು ಸೇವಾ ಪ್ರಾಧಿಕಾರಗಳು ಕಾರ್ಯನಿರ್ವಹಿಸುತ್ತಿವೆ.

ಆರ್ಥಿಕ ದುರ್ಬಲರಿಗೆ ಕಾನೂನು ನೆರವು, ಕಾನೂನು ಅರಿವು ಕಾರ್ಯಕ್ರಮ ಹಮ್ಮಿಕೊಳ್ಳುತ್ತಿವೆ. ಸಾಮಾಜಿಕ ಬದಲಾವಣೆಗಳಲ್ಲಿ ಕಾನೂನು ಸೇವಾ ಪ್ರಾಧಿಕಾರ ಮಹತ್ವದ ಪಾತ್ರ ವಹಿಸಿದೆ," ಎಂದರು. ರಾಷ್ಟ್ರೀಯ ಕಾನೂನು ಸೇವೆಗಳ ದಿನವನ್ನು ಆಚರಿಸುವ ಉದ್ದೇಶವು ದೇಶಾದ್ಯಂತ ದುರ್ಬಲ ವರ್ಗದ ಜನರಿಗೆ □ ಮಹಿಳೆಯರು, ಅಂಗವಿಕಲರು, ಪರಿಶಿಷ್ಟ ಪಂಗಡಗಳು, ಮಕ್ಕಳು, ಪರಿಶಿಷ್ಟ ಜಾತಿಗಳು,

ಮಾನವ ಕಳ್ಳಸಾ ಗಣೆ ಬಲಿಪಶುಗಳು ಮತ್ತು ನೈಸರ್ಗಿಕ ವಿಕೋಪಗಳ ಬಲಿಪಶುಗಳು □ ಉಚಿತ ಕಾನೂನು ಸೇವೆಗಳನ್ನು ಒದಗಿಸುವು ಉದ್ದೆಶವಾಗಿದೆ ಎಂದರು. ಕಾನೂನು ವ್ಯವಸ್ಥೆಯ ಕಾರ್ಯಾಚರಣೆಗಳನ್ನು ಸದೃಢಗೊಳಿಸಲು ಮತ್ತು ಜನರ ಸದಾಚಾರವನ್ನು ಸಮಾನ ಆಧಾರದ ಮೇಲೆ ಪ್ರೋತ್ಸಾಹಿಸಲು ಲೋಕ ಅದಾಲತ್‌ಗಳನ್ನು ಸಹ ಆಯೋಜಿಸಲಾಗುತ್ತದೆ. ಸಂವಿಧಾನದಡಿಯಲ್ಲಿ ಪ್ರತಿಯೊಬ್ಬರೂ ಕಾನೂನು ಅರಿವು ಪಡೆದುಕೊಂಡು ಆರೋಗ್ಯಕರ ಸಮಾಜ ನಿರ್ಮಾಣ ಮಾಡಲು ಮುಂದಾಗಬೇಕು ಎಂದರು.

ರಾಷ್ಟ್ರೀಯ ಮಟ್ಟದಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ, ರಾಜ್ಯ ಮಟ್ಟದಲ್ಲಿ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಗಳು, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿಗಳು ಕಾನೂನು ಅರಿವು ಮತ್ತು ನೆರವು ನೀಡಲು ಕೆಲಸ ಮಾಡುತ್ತಿವೆ ಎಂದು ಹೇಳಿದರು.



D.Amosh.R Cell: 9663949603
ಆರ್.ಪಿ. ಪ್ರಿಂಟಿಂಗ್ ಪ್ರೆಸ್
RP Printing Press
MULTI COLOUR | OFFSET | SCREEN & ALL TYPES OF PRINTING
Kamshetty Complex, Udgir Road, Bidar

Cell: 9886970762 8867199064
Max Power MOBILE CENTER
A complete Accessories Service Point
All Mobile Sales & repairing
Kamshetty Complex, Opp: Gurudwara Gate, Bidar

Jai Bhavani Prasanna Cell: 9164044426 9019122161
Srikanth A/c Hair Saloon With Mens Parlour
Kamshetty Complex, Opp: Gurudwara Gate, Bidar

# ಪತ್ರಕರ್ತರ ಸಂಘದ ಚುನಾವಣೆ: ಜಿಲ್ಲಾ ಅಧ್ಯಕ್ಷರಾಗಿ ಬಾಬುರಾವ ಯಡ್ರಾಮಿ ಪುನರಾಯ್ಕೆ



ಕಲಬುರಗಿ,ನ.11:ತೀವ್ರ ಕುತೂಹಲ ಕೆರಳಿಸಿದ್ದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಪತ್ರಕರ್ತ ಬಾಬುರಾವ ಯಡ್ರಾಮಿ ಅವರು ಪುನರಾಯ್ಕೆಯಾಗಿದ್ದಾರೆ. ಆ ಮೂಲಕ ಯಡ್ರಾಮಿ ಅವರು 4ನೇ ಬಾರಿಗೆ ಜಿಲ್ಲಾಧ್ಯಕ್ಷರಾದಂತಾಗಿದೆ.

ನಗರದ ಪತ್ರಿಕಾ ಭವನದಲ್ಲಿ ಸಂಘದ ಜಿಲ್ಲಾ ಘಟಕದ ಪ್ರಯುಕ್ತ ಭಾನುವಾರ ಮತದಾನ ನಡೆಯಿತು. ಬಾಬುರಾವ ಯಡ್ರಾಮಿ 170 ಮತ ಪಡೆದು ಗೆಲುವು ಸಾಧಿಸಿದರೆ, ಪ್ರತಿಸ್ಪರ್ಧಿ ಚಂದ್ರಶೇಖರ ಕೌಲಗಾ 120 ಮತಗಳನ್ನು ಪಡೆದು ಪರಾಭವಗೊಂಡರು.

185 ಮತ ಗಳಿಸಿದ ಭೀಮಾಶಂಕರ ಫಿರೋಜಾಬಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಪ್ರತಿಸ್ಪರ್ಧಿ ಸುರೇಶಕುಮಾರ ಡಿ.ಬಡಿಗೇರ 117 ಮತ ಪಡೆದು ಸೋಲು ಅನುಭವಿಸಿದರು.

ಅರುಣಕುಮಾರ ಕದಂ, ಶಿವರಂಜನ್ ಸತ್ಯಂಪೇಟೆ, ಹಣಮಂತರಾವ ಭೈರಾಮಡಗಿ (ಜಿಲ್ಲಾ ಉಪಾಧ್ಯಕ್ಷರು), ಅನಿಲ ಸ್ವಾಮಿ, ವಾಸುದೇವ ಚವ್ಹಾಣ್, ಬಾಬುರಾವ ಕೋಬಾಳ (ಜಿಲ್ಲಾ ಕಾರ್ಯದರ್ಶಿಗಳು), ಅಶೋಕ ಎಚ್.ಕಪನೂರ (ಜಿಲ್ಲಾ ಖಜಾಂಚಿ), ರಾಜಕುಮಾರ ಉದನೂರ (ರಾಜ್ಯ ಕಾರ್ಯಕಾರಿ ಸಮಿತಿ) ಆಯ್ಕೆಯಾದರು.

ಜಿಲ್ಲಾ ಕಾರ್ಯಕಾರಿ ಸಮಿತಿಯ 15 ಸ್ಥಾನಗಳಿಗೆ ಡಾ.ತೀರ್ಥಕುಮಾರ ಬೆಳಕೋಟಾ, ಅಕ್ರಂ ಪಾಶಾ, ಶರಣಬಸಪ್ಪ ಜಿಡಗಾ, ರಾಚಪ್ಪಾ ಜಂಬಗಿ, ವಿಜಯಕುಮಾರ ಗಾಜರೆ, ಸೂರ್ಯಕಾಂತ ಜಮಾದಾರ, ಶಕೀಲ್ ಚೌಧರಿ, ಸುಧೀರ ಬಿರಾದಾರ, ಗುರುರಾಜ ಕುಲಕರ್ಣಿ, ವಿಜಯಕುಮಾರ ಜಿಡಗಿ, ನಾಗರಾಜ ಗದ್ದಿಕಾಳಗಿ, ವೀರೇಶ ಎಸ್.ಮಾಲಗಾರ, ಅವಿನಾಶ ಕೊಳ್ಳುರ, ವಿಜಯಲಕ್ಷ್ಮೀ ಎನ್., ಸಂಜೀವಕುಮಾರ ಆಯ್ಕೆಯಾದರು.

ಜಿಲ್ಲಾ ಚುನಾವಣಾಧಿಕಾರಿಯಾಗಿ ಶಿವಶರಣಪ್ಪ ಬನ್ನಿಕಟ್ಟಿ ಕಾರ್ಯನಿರ್ವಹಿಸಿದರು.ಒಟ್ಟು 416 ಮತದಾರರ ಪೈಕಿ 397 ಜನ (ಶೇ.94.71 ರಷ್ಟು) ತಮ್ಮ ಹಕ್ಕು ಚಲಾಯಿಸಿದರು. ಒಟ್ಟು 25 ಸ್ಥಾನಗಳಿಗೆ 60 ಜನ ಕಣದಲ್ಲಿದ್ದರು.

# ಇಟಲಿ ಸಮ್ಮೇಳನದಲ್ಲಿ ಸಿಯುಕೆ ಕುಲಸಚಿವ ಆರ್. ಆರ್. ಬಿರಾದಾರ ಪ್ರಬಂಧ ಮಂಡನೆ

ಕಲಬುರಗಿ,ನ.11: ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಸ ಚಿವ ಪ್ರೊ.ಆರ್.ಆರ್.ಬಿರಾದಾರ ಅವರು ಭಾರತದಲ್ಲಿ ತೈಲ ಅನ್ವೇಷಣೆಯಲ್ಲಿ ಸೂಕ್ಷ್ಮಜೀವಾವಶೇಷಗಳ ಆರ್ಥಿಕ ಪ್ರಯೋಜನಗಳು: ತೈಲ ಮತ್ತು ನೈಸರ್ಗಿಕ ಅನಿಲ ನಿಗಮದ ಒಂದು ಅಧ್ಯಯನ'ಎಂಬ ವಿಷಯದ ಮೇಲೆ ಸಂಶೋಧನಾ ಪ್ರಬಂಧವನ್ನು ಮಂಡಿಸಿದ್ದಾರೆ. ಇಟಲಿಯ ಪಿಸಾ ವಿಶ್ವವಿದ್ಯಾಲಯದ ಭೂವಿಜ್ಞಾನ ವಿಭಾಗದಲ್ಲಿ ನವೆಂಬರ್ ರಿಂದ 5–7, ವರೆಗೆ ನಡೆದ 'ದಿ ಮೈಕ್ರೋಪೇಲಿಯಂಟಾಲಜಿಕಲ್ ಸೊಸೈಟಿಯ' ವಾರ್ಷಿಕ ಸಮ್ಮೇಳನದಲ್ಲಿ ಈ ಪ್ರಬಂಧ ಮಂಡಿಸಿದರು. ಇದರಲ್ಲಿ ನ್ಯಾನೋವಿಜ್ಞಾನವೂ ಸೇರಿದಂತೆ, ಪೆಟ್ರೋಲಿಯಂ, ಕಲ್ಲಿದ್ದಲು ಮತ್ತು ಹವಾಮಾನ ಅಧ್ಯಯನಗಳಲ್ಲಿ ಸೂಕ್ಷ್ಮಜೀವಾವಶೇಷಗಳ ಉಪಯೋಗ ಮತ್ತು ಆರ್ಥಿಕ ಪ್ರಯೋಜನಗಳ ಕುರಿತಾಗಿ ಪ್ರೊ.ಬಿರಾದಾರ ಅವರು ವಿಶ್ಲೇಷಿಸಿದರು. ಸೂಕ್ಷ್ಮಜೀವಾವಶೇಷಗಳ ವಿಶ್ಲೇಷಣೆಯ ಫಲಿತಾಂಶಗಳು ತೈಲ ಅನ್ವೇಷಣೆಗಾಗಿ ಒಣ (ಶುಷ್ಕ) ಕೊಳವೆಗಳನ್ನು ಕೊರೆಯುವ ಅಪಾಯವನ್ನು ಶೇ. 40ರಷ್ಟು ಕಡಿಮೆ ಮಾಡುತ್ತದೆ ಮತ್ತು ಇದರಿಂದ ಯೋಜನೆಯ ಒಟ್ಟಾರೆ ವೆಚ್ಚದ ಕನಿಷ್ಠ ನಾಲ್ಕನೇ ಒಂದು ಭಾಗದಷ್ಟು ತೈಲ ಅನ್ವೇಷಣೆಯ ಒಟ್ಟಾರೆ ವೆಚ್ಚವನ್ನು ಕಡಿಮೆ ಮಾಡುತ್ತದೆ ಎಂದು ಅಧ್ಯಯನದಲ್ಲಿ ಪ್ರತಿಪಾದಿಸಲಾಗಿದೆ ಭಾರತದ ಒಂದು ಸಾರ್ವಜನಿಕ ಉದ್ಯಮವಾದ ಆಯಿಲ್ ಅಂಡ್ ನ್ಯಾಚುರಲ್ ಗ್ಯಾಸ್ ಕಾರ್ಪೊರೇಶ???ದ ಹಣಕಾಸಿನ ಕುರಿತಾಗಿ ಚರ್ಚಿಸುತ್ತಾ, ಪ್ರತಿ ಮಿಲಿಯನ್ ಮೆಟ್ರಿಕ್ ಟನ್ (ಎಂಎಂಟಿ) ತೈಲ ಅನ್ವೇಷಣೆ ಮತ್ತು ಉತ್ಪಾದನೆಗಾಗಿ ವಾರ್ಷಿಕ ಸರಾಸರಿ ವೆಚ್ಚ ಬಹಳ ವೇಗವಾಗಿ ಹೆಚ್ಚಿದೆ, ಆದರೆ ನಿವ್ವಳ ಆದಾಯದ ಏರಿಕೆ ಬಹಳಷ್ಟು ನಿಧಾನವಾಗಿದೆ. 2001 ರಿಂದ 2024ರ ಅವಧಿಯಲ್ಲಿ ಒಎನ್‌ಜಿಸಿಯ ವಾರ್ಷಿಕ ಒಟ್ಟು ತೈಲ ಅನ್ವೇಷಣೆ ಮತ್ತು ಉತ್ಪಾದನೆಯ ಪ್ರಮಾಣವು ಸತತವಾಗಿ ಕಡಿಮೆಯಾಗಿದೆ. ಮುಂಬರುವ ದಿನಮಾನಗಳಲ್ಲಿ ತೈಲ ಬಿಕ್ಕಟ್ಟನ್ನು ನಿಭಾಯಿಸಲು, ಸೂಕ್ಷ್ಮಜೀವಾವಶೇಷಗಳ ಶೇಖರಣೆಯಿರುವ ಪ್ರದೇಶಗಳನ್ನು ಗುರುತಿಸುವ ಅನ್ವೇಷಣಾ ಅಧ್ಯಯನಗಳನ್ನು ಪ್ರೋತ್ಸಾಹಿಸಬೇಕು ಮತ್ತು ತೈಲ ಅನ್ವೇಷಣೆ ಮತ್ತು ಉತ್ಪಾದನೆಯನ್ನು ಬೃಹತ್ ಪ್ರಮಾಣದಲ್ಲಿ ಕೈಗೊಳ್ಳಲು ಖಾಸಗಿ ವಲಯವನ್ನು ಪ್ರೇರೇಪಿಸಬೇಕು ಎಂದು ಅಧ್ಯಯನವು ಸೂಚಿಸಿದೆ.



# ಗೋವನ್ನು ತಾಯಿ ರೂಪದಲ್ಲಿ ಕಾಣುವ ಸಂಸ್ಕೃತಿ ನಮ್ಮದು: ಶಂಕರ ಭಾರತಿ ಮಹಾಸ್ವಾಮಿಗಳು



ಕಲಬುರಗಿ:ನ.11:ವಿಶ್ವ ಹಿಂದೂ ಪರಿಷತ್ ಕಲಬುರಗಿ ಮಹಾನಗರ ಘಟಕದ ವತಿಯಿಂದ ಭಾನುವಾರ ಸಂಜೆ ಜೇವರ್ಗಿ ರಸ್ತೆಯಲ್ಲಿರುವ ಶ್ರೀರಾಮ ಮಂದಿರದಲ್ಲಿ ಗೋಪಾಷ್ಟಮಿ ನಿಮಿತ್ತ ವಿಶೇಷ ಕಾರ್ಯಕ್ರಮವನ್ನು ಅದ್ದೂರಿಯಾಗಿ ಹಮ್ಮಿಕೊಳ್ಳಲಾಗಿತ್ತು.ಗೋಪಾಷ್ಟಮಿ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿದ್ದ ಯಡತೊರೆ ಶ್ರೀ ಶಂಕರ ಭಾರತಿ ಮಹಾಸ್ವಾಮಿಗಳು"ನಮ್ಮ ಸಮಸ್ತ ಸಮಾಜ ಗೋವಿನ ರಕ್ಷಣೆಯಲ್ಲಿ ತೊಡಗಬೇಕು. ನಗರದಲ್ಲಿ ವಾಸಿಸುವ ಜನರು ಗೋ ಸಂರಕ್ಷಣೆ ಮಾಡುವವರಿಗೆ ವಿಶೇಷವಾದ ಸಹಕಾರ ಮತ್ತು ಸಹಯೋಗ ನೀಡಬೇಕು. ವಿಶ್ವ ಹಿಂದೂ ಪರಿಷತ್ ಪ್ರತಿ ವರ್ಷ ಗೋಪಾಷ್ಟಮಿ ಆಚರಣೆ ಮಾಡಿ ಗೋವಿನ ಮಹತ್ವವನ್ನು ಸಾಮಾನ್ಯ ಜನರಿಗೆ ತಲುಪಿಸುತ್ತಿರುವುದು ಅತ್ಯಂತ ಸಂತಸ ತಂದಿದೆ" ಎಂದು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಕಾರ್ಯಕ್ರಮದ ವಕ್ತಾರರಾಗಿ ಆಗಮಿಸಿದ್ದ ಶ್ರೀ ವ್ಯಾಸರಾಜ ಸಂತೆಕೆಲ್ಲೂರು ಅವರು ಮಾತನಾಡಿ, "ಗೋವು ಕೇಳಿದ್ದನ್ನು ಕೊಡುವ ಕಾಮಧೇನು. ಹಸುವಿನಲ್ಲಿ ಲಕ್ಷ್ಮೀ ದೇವಿ ನೆಲೆಸಿದ್ದಾಳೆ ಮತ್ತು ಗೋಮಾತೆ ಅತ್ಯಂತ ಪೂಜ್ಯನೀಯ ಎಂದರು.

ವಿಶ್ವ ಹಿಂದೂ ಪರಿಷತ್ ಕಲಬುರಗಿ ಮಹಾನಗರ ಕಾರ್ಯದರ್ಶಿ ಶ್ರೀ ರಾಮಚಂದ್ರ ಸೂಗೂರು ಪ್ರಾಸ್ತಾವಿಕವಾಗಿ ಮಾತನಾಡಿದರು,

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಶ್ವ ಹಿಂದೂ ಪರಿಷತ್ ಕಲಬುರಗಿ ಮಹಾನಗರದ ಅಧ್ಯಕ್ಷರಾದ ಶ್ರೀ ಚನ್ನಬಸಪ್ಪ ಸಮಾಣಿ ಅವರು ವಹಿಸಿದ್ದರು. ಡಾ. ಸುಧೀರ್ ಕೂಳಗೇರಿ ಅವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು. ಶ್ರೀಮತಿ ಪೂನಂ ಕುಲಕರ್ಣಿ ಸತ್ಸಂಗ ನಡೆಸಿಕೊಟ್ಟರೆ, ಶ್ರೀಮತಿ ಸುನಂದಾ ಸಾಲವಾಡಗಿ ಪ್ರಾರ್ಥನ ಗೀತೆ ಹಾಡಿದರು. ವಿನುತಕುಮಾರ್ ಜೋಶಿ ಪರಿಚಯ ಭಾಷಣ ಮಾಡಿದರು ಹಾಗೂ ಮಲ್ಹಾರಾವ ಗಾರಂಪಳ್ಳಿ ವಂದನಾರ್ಪಣೆ ಮಾಡಿದರು.

ಶ್ರೀರಾಮ ಮಂದಿರದ ಪ್ರಮುಖರಾದ ಕಿಶೋರ್ ದೇಶಪಾಂಡೆ, ಪ್ರಮುಖರಾದ ಅವಿನಾಶ್ ಕುಲಕರ್ಣಿ, ಆನಂದತೀರ್ಥ ದೇಶಪಾಂಡೆ, ಅಂಬಾರಾಯ ಅಂಬಲಗಿ, ಸತೀಶ್ ಕೋಟನೂರು, ಸಮೀರ್ ಕುಲಕರ್ಣಿ, ಶ್ರೀನಿವಾಸ್ ಕುಲಕರ್ಣಿ, ಅಶ್ವಥ್ ಜೋಶಿ, ಮಂಜುನಾಥ್ ಕುಲಕರ್ಣಿ, ರಾಜಶ್ರೀ ದೇಶಮುಖ್, ಸುನಂದ ಜೋಶಿ, ಪಲ್ಲವಿ ಭರತನೂರು, ಅರ್ಚಕರಾದ ನಾಗರಾಜಾಚಾರ್ಯ,ವ್ಯವಸ್ಥಾಪಕರಾದ ನಿರಂಜನರಾವ್, ಗಿರೀಶ್ ಕುಲಕರ್ಣಿ ಇತರರಿದ್ದರು.

# ಶರಣಬಸವ ವಿಶ್ವವಿದ್ಯಾಲಯದಲ್ಲಿ ಎರಡು ದಿನಗಳ ಐಇಇಇ 2025 ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯಾಗಾರ

ಕಲಬುರಗಿ:ನ11:ಇನ್ಸ್ಟಿಟ್ಯೂಟ್ ಆಫ್ ಇಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ ಇಂಜಿನಿಯರಿಂಗ್ ವಿಭಾಗದ (ಐಇಇಇ) ಐಇಇಇ ದಿನಾಚರಣೆ 2025 ಮತ್ತು ಖಇಇಇ ಉತ್ತರ ಕರ್ನಾಟಕ ಉಪವಿಭಾಗ ವಿದ್ಯಾರ್ಥಿ ಕಾಂಗ್ರೆಸ್– 'ಸೃಜನಂ' ಎರಡು ದಿನಗಳ ಕಾರ್ಯಕ್ರಮವನ್ನು ಶರಣಬಸವ ವಿಶ್ವವಿದ್ಯಾಲಯದಲ್ಲಿ ಭಾನುವಾರ ಉದ್ಘಾಟಿಸಲಾಯಿತು. ಈ ಕಾರ್ಯಕ್ರಮವು ಕೃತಕ ಬುದ್ಧಿಮತ್ತೆ ಚಾಲಿತ ಸಂಶೋಧನೆ, ಪೇಟೆಂಟ್ ಫೈಲಿಂಗ್, ರೋಬೋಟಿಕ್ ಆಪರೇಟಿಂಗ್ ಸಿಸ್ಟಮ್ ತರಗತಿಗಳನ್ನು ಒಳಗೊಂಡ ಬಹು–ಡೊಮೇನ್ ತಾಂತ್ರಿಕ ಪ್ರಾಯೋಗಿಕ ಕಲಿಕೆ ಒಳಗೊಂಡಿದೆ.

ತಮ್ಮ ಉದ್ಘಾಟನಾ ಭಾಷಣದಲ್ಲಿ ಮಾತನಾಡಿದ ಡಾ.ದೇವೇಂದ್ರ ಗೌಡ ಅವರು ಇಂಟರ್ನ್‌ಶಿಪಗಳು, ಕೈಗಾರಿಕಾ ಯೋಜನೆಗಳು ಮತ್ತು ವೃತ್ತಿಪರ ನೆಟ್ವರ್ಕ್ ಮೂಲಕ ಬಲವಾದ ಪ್ರೊಫೈಲ್ ರಚಿಸುವಲ್ಲಿ ಐಇಇಇ ಸದಸ್ಯರಾಗಿರುವ ವಿದ್ಯಾರ್ಥಿಗಳ ಪ್ರಯೋಜನಗಳ ಬಗ್ಗೆ ತಿಳಿಸಿದರು. ಈ ವಿದ್ಯಾರ್ಥಿ ಕಾಂಗ್ರೆಸ್‌ಗೆ ಆತಿಥ್ಯ ನೀಡಿದ ಶರಣಬಸವ ವಿಶ್ವವಿದ್ಯಾಲಯವನ್ನು ಅಭಿನಂದಿಸಿದ ಅವರು, ವಿದ್ಯಾರ್ಥಿಗಳ ಕೌಶಲ್ಯವನ್ನು ಬಲಪಡಿಸಲು ಅಗತ್ಯವಿರುವ ಎಲ್ಲಾ ರೀತಿಯ ಸಹಾಯವನ್ನು ಐಇಇಇ ನೀಡುತ್ತದೆ ಎಂದರು. ಐಇಇಇ 50ನೇ ವರ್ಷವನ್ನು ಪ್ರವೇಶಿಸಿದೆ ಮತ್ತು ರಾಜ್ಯದಾದಂತ್ಯ ಹೆಚ್ಚಿನ ಸದಸ್ಯತ್ವ ಶಕ್ತಿಯನ್ನು ಹೊಂದಿದೆ. ಈಗಾಗಲೇ ಐಇಇಇ ಕರ್ನಾಟಕ 21,700 ಹೊಸ ಸದಸ್ಯರನ್ನು ನೋಂದಾಯಿಸಿಕೊಂಡಿದೆ. ಈ ವರ್ಷದ ಕೊನೆಯ ವೇಳೆಗೆ 25,000 ಹೊಸ ಸದಸ್ಯತ್ವದ ಗುರಿಯನ್ನು ಸಾಧಿಸಲಿದೆ ಎಂದರು.

ಡಾ. ಅಭಿಷೇಕ ದೇಶಮುಖ ಅವರು ಮಾತನಾಡಿ, ಐಇಇಇ ಉತ್ತರ ಕರ್ನಾಟಕ ಉಪವಿಭಾಗವು ತನ್ನ ಐದು ವರ್ಷಗಳ ಅಸ್ತಿತ್ವದಲ್ಲಿ ಅನೇಕ ಪ್ರಮುಖ ಘಟನೆಗಳನ್ನು ನಡೆಸಿದೆ ಮತ್ತು ಈ ವರ್ಷ ಶರಣಬಸವ ವಿಶ್ವವಿದ್ಯಾಲಯದಲ್ಲಿ "ಸೃಜನಂ" ಎಂಬ ಹೊಸ ಪ್ರಮುಖ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದರು.

ವಿದ್ಯಾರ್ಥಿ ಸಮುದಾಯವು ತಮ್ಮ ಸಹಪಾಠಿಗಳೊಂದಿಗೆ ಸಂಪರ್ಕ ಸಾಧಿಸಿಕೊಳ್ಳಲು ಮತ್ತು ಜ್ಞಾನವನ್ನು ಹಂಚಿಕೊಳ್ಳಲು ಒಂದು ವೇದಿಕೆಯನ್ನು ಒದಗಿಸಲು ಈ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದರು.

ಶರಣಬಸವ ವಿಶ್ವವಿದ್ಯಾಲಯದ ಡೀನ್ ಡಾ. ಲಕ್ಷ್ಮಿ ಪಾಟೀಲ್ ಮಾಕಾ ಅವರು ತಮ್ಮ ಸ್ವಾಗತ ಭಾಷಣದಲ್ಲಿ, ಖಇಇಇ ಐಇಇಇ ವಿದ್ಯಾರ್ಥಿ ಶಾಖೆಗಳು ಪ್ರಾರಂಭಿಸಿದ ವಿವಿಧ ಚಟುವಟಿಕೆಗಳನ್ನು ಮತ್ತು ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮೇಲೆತ್ತಿ ತೋರಿಸಲು ಇದು ಹೇಗೆ ಅಗತ್ಯವಾಗುವುದು ಎಂದು ಹೇಳಿದರು. ಅವರು ಐಇಇಇ ವಿದ್ಯಾರ್ಥಿ ಶಾಖೆಯ ಮಾರ್ಗದರ್ಶಕಿ ಆಗಿರುವುದರ ಕುರಿತು ವಿವರಿಸಿದರು.

ಶರಣಬಸವ ವಿಶ್ವವಿದ್ಯಾಲಯದ ನಿರ್ದೇಶಕ ಪ್ರೋ.ವಿ.ಡಿ. ಮೈತ್ರಿ ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಐಇಇಇ ಏರ್ಪಡಿಸುವ ಎಲ್ಲಾ ಪ್ರಯೋಜನಗಳು ಮತ್ತು ಹ್ಯಾಂಡ್ಸ್–ಆನ್ ತರಬೇತಿ ಕಾರ್ಯಕ್ರಮಗಳನ್ನು ಪಡೆದುಕೊಳ್ಳಲು ಪ್ರತಿಯೊಬ್ಬ ಇಂಜಿನಿಯರಿಂಗ್ ವಿದ್ಯಾರ್ಥಿಯೂ ಐಇಇಇ ಸದಸ್ಯರಾಗಬೇಕು ಎಂದು ತಿಳಿಸಿದರು. ಇಂಟರ್ನ್‌ಶಿಪಗಳು ಕಾರ್ಯಕ್ರಮಗಳು ಮತ್ತು ವಿದ್ಯಾರ್ಥಿಗಳ ಯೋಜನಾ ಕಾರ್ಯಗಳಲ್ಲಿ ಖಇಇಇ ಐಇಇಇನ ಸಹಾಯವು ಅಪಾರವಾಗಿದೆ ಎಂದರು. ಖಇಇಇ ಐಇಇಇ ನೊಂದಿಗಿನ ತಮ್ಮ ಅನುಭವ ಮತ್ತು ದೀರ್ಘಕಾಲದ ಸಂಬಂಧವನ್ನು ಅವರು ಹಂಚಿಕೊಂಡರು.








Owner, Editor, Printerd,and published, :-Owner - sidramayya swamy devi colony bidar - 585401, Editor-sidramayya swamy devi colony bidar, Printed at Sri sai offset printer's H.NO : 8-9-416/1 devi colony bidar - 585401 Published at H.NO:8-9-416/1 devi colony Bidar - 585401